ಧಾರವಾಡ * ಕಾರವಾರ * ಹಾವೇರಿ * ಕೊಪ್ಪಳ * ಬಳ್ಳಾರಿ * ಬಾಗಲಕೋಟ * ವಿಜಯನಗರ * ಗದಗದಿಂದ ಏಕ ಕಾಲಕ್ಕೆ ಒಂದೇ ಸಂಚಿಕೆ ಪ್ರಕಟಗೊಳ್ಳುವ ದಿನ ಪತ್ರಿಕೆ



# ಸ್ನೇಹ ಜೀವಿ

ಉತ್ತರ ಕರ್ನಾಟಕದ ಧ್ವನಿ...!

SNEHAJEEVI KANNADA DAILY

ಕನ್ನಡ ದಿನಪತ್ರಿಕೆ




ಡಾ. ಎ.ಎನ್. ಶಾಲಗಾರ ಸಾರಥ್ಯದಲ್ಲಿ | MAG: PRBCR-10/2016-17 | Mob: 94827 70999 | e-mail: snehajeevidaily@gmail.com | Editor: Dr. A.N. Shalagar

RNI NO. KARKAN/2013/49379 | Volume / ಸಂಪುಟ : 14 | Issue / ಸಂಚಿಕೆ : 225 | Date : 19-09-2025 ಶುಕ್ರವಾರ | Page / ಪುಟ : 4 | ಗದಗ–GADAG | Rs. 2/-

ಪುಟ -4 ಹುಬ್ಬಳ್ಳಿಯಲ್ಲಿ ಏಕತಾ ಸಮಾವೇಶ, ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ

ಪುಟ -3 ದಸರಾ ಮಹೋತ್ಸವ– ಘಟಸ್ಥಾಪನೆ ಮತ್ತು ಶ್ರೀದೇವಿ ಪುರಾಣ ಪ್ರಾರಂಭೋತ್ಸವ

ಪುಟ -2 ಹಿಂದೂ ಜಾತಿಗಳ ಕಾಲಂನಲ್ಲಿ 'ಕ್ರಿಶ್ಚಿಯನ್' ಪದ ಸೇರಿಕೆಗೆ ವಿರೋಧ

ಪುಟ -4 ವೀರಶೈವ ಲಿಂಗಾಯತ ಏಕತಾ ಸಮಾವೇಶ ಬರುವ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ

# ರಕ್ತದ ಅವಶ್ಯಕತೆ ಮತ್ತು ಸುರಕ್ಷಿತ ರಕ್ತ ಸಂಗ್ರಹಣೆಯ ಮಹತ್ವ: ರಾಜ್ಯಪಾಲ ಥಾವರಚಂದ್ ಗೆಹೋಟ್

## ಸರ್ಕಾರದ ಕ್ರಮ ಪ್ರಶ್ನಿಸಿ ಐಪಿಎಸ್ ಅಲೋಕ್ ಕುಮಾರ್ ಅರ್ಜಿ:

## ಡಿಜಿಪಿಯಾಗಿ ಉಮೇಶ್ ಕುಮಾರ್,ಅರುಣ್ ಚಕ್ರವರ್ತಿ ಬಡ್ತಿಗೆ ಸಿಎಟಿ ತಡೆ!

❑ ಸ್ನೇಹಜೀವಿ ನ್ಯೂಸ್

ಬೆಂಗಳೂರು : ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅವರಿಗೆ ಸರ್ಕಾರ ಬಡ್ತಿ ನೀಡದೇ ಕಿರಿಯ ಅಧಿಕಾರಿಗಳಾಗಿದ್ದ ಉಮೇಶ್ ಕುಮಾರ್ ಹಾಗೂ ಅರುಣ್ ಚಕ್ರವರ್ತಿ ಅವರನ್ನು ಡಿಜಿಪಿಯಾಗಿ ಬಡ್ತಿ ನೀಡಿ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಸಿಎಟಿ (ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ) ತಡೆ ನೀಡಿದೆ.

ಡಿಜಿಪಿ ಹುದ್ದೆಯ ಆಕಾಂಕ್ಷಿಯಾಗಿದ್ದ ಅಲೋಕ್ ಕುಮಾರ್,ತನಗೆ ಸೇವಾ ಹಿರಿತನವಿದ್ದರೂ ಸರ್ಕಾರ ತನ್ನನ್ನು ಪರಿಗಣಿಸದೇ ತನಗಿಂತ ಕಿರಿಯರಾದ ಉಮೇಶ್ ಕುಮಾರ್ ಹಾಗೂ ಅರುಣ್




ಚಕ್ರವರ್ತಿ ಅವರಿಗೆ ನೀಡಿದ್ದ ಬಡ್ತಿಯನ್ನು ಪ್ರಶ್ನಿಸಿ ಸಿಎಟಿ ಮೊರೆ ಹೋಗಿದ್ದರು. ಅಲೋಕ್ ಕುಮಾರ್ ಅವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿರುವ ಹಿನ್ನೆಲೆಯಲ್ಲಿ ಇದನ್ನು ಮುಂದಿಟ್ಟು ರಾಜ್ಯ ಸರ್ಕಾರ ಅವರಿಗೆ ಮುಂಬಡ್ತಿ ನೀಡಿರಲಿಲ್ಲ. ಅಲೋಕ್ ಕುಮಾರ್ ಉಪೇಕ್ಷಿಸಿ ಡಿಜಿಪಿಯಾಗಿ ಉಮೇಶ್ ಕುಮಾರ್ ಹಾಗೂ ಅರುಣ್ ಚಕ್ರವರ್ತಿಯವರಿಗೆ ಸರ್ಕಾರ ಬಡ್ತಿ ನೀಡಿತ್ತು.

ಇದನ್ನು IPS ಅಧಿಕಾರಿ ಅಲೋಕ್ ಕುಮಾರ್ ಪ್ರಶ್ನಿಸಿ ಸಿಎಟಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಅಂತಿಮವಾಗಿ ಇಬ್ಬರು ನ್ಯಾಯಮೂರ್ತಿಗಳು ಅಲೋಕ್ ಕುಮಾರ್ ಅರ್ಜಿ ಬಗ್ಗೆ ವಿಭಿನ್ನ ರೀತಿಯ ತೀರ್ಪು ನೀಡಿದ್ದಾರೆ.

ಸಿಎಟಿಯ ಮೂರನೇ ನ್ಯಾಯಮೂರ್ತಿ ಇಲಾಖೆ ವಿಚಾರಣೆ ಬಗ್ಗೆ ತೀರ್ಮಾನಿಸಬೇಕಿದೆ.

ಈ ನಡುವೆ ಸಿಎಟಿ ಡಿಜಿಪಿಯಾಗಿ ನೇಮಕಗೊಂಡಿದ್ದ ಉಮೇಶ್ ಕುಮಾರ್ ಹಾಗೂ ಅರುಣ್ ಚಕ್ರವರ್ತಿ ಅವರ ಬಡ್ತಿಗೆ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ.

## ರೋಟರಿ ಉದ್ಯೋಗ್–ರೆಡ್ಕ್ರಾಸ್ ರಕ್ತನಿಧಿ ಕೇಂದ್ರ ಉದ್ಘಾಟನೆ

❑ ಸ್ನೇಹಜೀವಿ ನ್ಯೂಸ್

ಬೆಂಗಳೂರು, 17 ಸೆ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ **(IRCS, K**58) ಮತ್ತು ರೋಟರಿ ಬೆಂಗಳೂರು ಉದ್ಯೋಗಗಳ ಸಹಯೋಗದಲ್ಲಿ, ರೋಟರಿ ಉದ್ಯೋಗ್ ರೆಡ್ ಕ್ರಾಸ್ ರಕ್ತ ಕೇಂದ್ರವನ್ನು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಕೆ–ಎಲ್ಇ (ರವಿ ಕಿರ್ಲೋಸ್ಕರ್) ಆಸ್ಪತ್ರೆಯಲ್ಲಿ ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನು ಗೌರನಾನ್ವಿತ ರಾಜ್ಯಪಾಲರಾದ ಥಾವರಚಂದ್ ಗೆಹೋಟ್ ಗಿಡಕ್ಕೆ ನೀರೆರೆಯುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ರಕ್ತದ ಅವಶ್ಯಕತೆ ಮತ್ತು ಸುರಕ್ಷಿತ ರಕ್ತ ಸಂಗ್ರಹಣೆಯ ಮಹತ್ವವನ್ನು ವಿವರಿಸಿಸಿ, ರೋಟರಿ ಮತ್ತು ರೆಡ್ಕ್ರಾಸ್ ಸಂಸ್ಥೆಗಳ ಸಮಾಜಮುಖಿ ಸೇವೆಯನ್ನು ಶ್ಲಾಘಿಸಿದರು.

ರೋಟರಿಯನ್ ಎಲಿಜಬೆತ್ ಚೆರಿಯನ್, ರೋಟರಿ ಉದ್ಯೋಗ್ ಯೋಜನೆ ಕು–ರಿತು ವಿವರಿಸಿದರು.ಈ ಸಂದರ್ಭದಲ್ಲಿ ಪಿ. ಜಯಶಂಕರ್ಹಾಗೂ ಎಸ್.ರವಿರಾಜ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ರೆಡ್ಕ್ರಾಸ್ ರಾಜ್ಯ ಶಾಖೆಯ ಉಪಸಭಾಪತಿ ಶ್ರೀನಿವಾಸ್ ಹ್ಯಾಟಿ, ಕೆಎಲ್ಇ ಸೊಸೈಟಿ ಅಧ್ಯಕ್ಷ ಪ್ರಭಾಕರ ಕೋರೆ ಹಾಗೂ ಮತ್ತಿತರರು.

ಉಪಸ್ಥಿತರಿದ್ದರು.ಐ.ಆರ್.ಸಿಎಸ್,ಕೆ.ಎಸ್.ಬಿ ಅಧ್ಯಕ್ಷ ಬಸ್ರೂರು ರಾಜೀವ್ ಶೆಟ್ಟಿ ಸ್ವಾಗತಿಸಿ,ಐ.ಆರ್.ಸಿಎಸ್, ಕೆ.ಎಸ್.ಬಿ ಉಪಾಧ್ಯಕ್ಷ ಭಾಸ್ಕರ್ ರಾವ್ ವಂದಿಸಿದರು.




## ಶಿಕ್ಷಕರ ಸೇವೆಗೆ ಬೆಲೆ ಕಟ್ಟಲಾಗದು, ವಿದ್ಯಾರ್ಥಿಗಳು ಮೊಬೈಲ್‌ನಿಂದ ದೂರವಿರಲು ಡಾ.ಪ್ರಸಾದ ಕರೆ

❑ ಸ್ನೇಹಜೀವಿ ನ್ಯೂಸ್

ಹುಬ್ಬಳ್ಳಿ. : ಶಿಕ್ಷಕರ ಸೇವೆಗೆ ಬೆಲೆ ಕಟ್ಟಲಾಗದು , ವಿದ್ಯಾರ್ಥಿಗಳು ಮೊಬೈಲ್‌ನಿಂದ ದೂರವಿರಲು... ಡಾ. ವಿ.ಎಸ್.ವಿ ಪ್ರಸಾದ ಕರೆ

ಗಂಗಾವತಿ ಶಿಕ್ಷಕರ ಸೇವೆಗೆ ನಾವು ಬೆಲೆ ಕಟ್ಟಲು ಆಗುವುದಿಲ್ಲ, ವಿದ್ಯಾರ್ಥಿಗಳು ಮೊಬೈಲ್ ನಿಂದ ದೂರವಿದ್ದು,ಸತತ ಪರಿಶ್ರಮದಿಂದ ನಿಮ್ಮ ಗುರಿಯತ್ತ ಗಮನಹರಿಸಬೇಕು,

ಪ್ರತಿಯೊಬ್ಬರೂ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸ್ವರ್ಣಾ ಸಮೂಹ ಸಂಸ್ಥೆ ಚೇರ್ಮನ್ ಡಾ. ಸಿ.ಎಚ್. ವಿ. ಎಸ್. ವಿ. ಪ್ರಸಾದ್ ಕಿವಿಮಾತು ಹೇಳಿದರು.

ಇಲ್ಲಿನ ವಿದ್ಯಾನಗರದಲ್ಲಿರುವ ಶಾರದಾ ವಿದ್ಯಾ ಸಂಸ್ಥೆಯಲ್ಲಿ 78 ನೇ ಕಲ್ಯಾಣ ಕರ್ನಾಟಕ ದಿನಾಚರಣೆ ಹಾಗೂ ಶಿಕ್ಷಕರ ದಿನಾಚರಣೆಯಲ್ಲಿ ಮುಖ್ಯಅತಿಥಿಗಳಾಗಿ ಪಾಲ್ಗೊಂಡು ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಶಿಕ್ಷಕರಿಂದ ನಿರೀಕ್ಷಿತ ಬದಲಾವಣೆ ಸಾಧ್ಯ, ಪ್ರತಿಯೊಬ್ಬ ಶಿಕ್ಷಕರು ಪ್ರಾಮಾಣಿಕ ಪ್ರಯತ್ನದೊಂದಿಗೆ ಮಕ್ಕಳ ಭವಿಷ್ಯ ರೂಪಿಸಬೇಕು, ಶಿಕ್ಷಕರ ವೃತ್ತಿ ಪವಿತ್ರವಾದದ್ದು , ವ್ಯಕ್ತಿ ಎಷ್ಟೇ ಎತ್ತರಕ್ಕೇರಿದರು ತನಗೆ ಶಿಕ್ಷಣ ನೀಡಿದ ಶಿಕ್ಷಕರ ಬಗ್ಗೆ ಗೌರವ ಮತ್ತು ವಿಶ್ವಾಸವಿರುತ್ತದೆ. ಎಲ್ಲರೂ ವೃತ್ತಿಗೆ ಘನತೆ ತರುವಂತೆ ಕೆಲಸಮಾಡಬೇಕು , ಶೈಕ್ಷಣಿಕ ಗುಣಮಟ್ಟ ಸುಧಾರಣೆ ಹಾಗೂ ಮಕ್ಕಳ ಉತ್ತಮ ಭವಿಷ್ಯ ನಿರ್ಮಾಣಕ್ಕೂ ಒಗ್ಗಟಿನಿಂದ ಕೆಲಸ ಮಾಡಬೇಕು ಎಂದ ಅವರು ತಾಂತ್ರಿಕತೆ ಬೆಳೆದಂತೆ ಡಿಜಿಟಲ್ ಮಾಯಾಲೋಕಕ್ಕೆ ಮರುಳಾಗುತ್ತಿರುವ ಇಂದಿನ ಯುವ ಸಮೂಹ ಓದಿನಿಂದ ವಿಮುಕರಾಗಿದ್ದಾರೆ. ಇದರಿಂದ ಯುವ ಜನಾಂಗದಲ್ಲಿ ಜ್ಞಾನದ ಸಂಪತ್ತು ಕುಂಟುತ್ತಾ ಹೋಗುತ್ತಿದೆ.









# ಹಿಂದೂ ಜಾತಿಗಳ ಕಾಲಂನಲ್ಲಿ 'ಕ್ರಿಶ್ಚಿಯನ್' ಪದ ಸೇರಿಕೆಗೆ ವಿರೋಧ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ಸರ್ಕಾರದ ಉದ್ದೇಶಿತ ಜಾತಿಗಳ ಶೈಕ್ಷಣಿಕ ಹಾಗೂ ಸಾಮಾಜಿಕ ಸಮೀಕ್ಷೆಯಲ್ಲಿ ಹಿಂದೂ ಜಾತಿಗಳ ಕಾಲಂನಲ್ಲಿ ಕ್ರಿಶ್ಚಿಯನ್ ಎಂಬ ಪದ ಸೇ-ರಿಸಿರುವುದನ್ನು ಖಂಡಿಸಿ, ಗದಗದ ವಿವಿಧ ಸಮಾಜಗಳ ಮಠಾಧೀಶರು, ಮುಖಂಡರ ನೇತೃತ್ವದಲ್ಲಿ ಗುರುವಾರ ಬೃಹತ್ ಪಾದಯಾತ್ರೆ ಹಾಗೂ ಪ್ರತಿಭಟನೆ ನಡೆಯಿತು.

ಕಿತ್ತೂರ ರಾಣಿ ಚೆನ್ನಮ್ಮ ಸರ್ಕಲ್‌ನಿಂದ ಆರಂಭವಾದ ಪಾದಯಾತ್ರೆ, ಮುಳಗುಂದ ನಾಕಾದಲ್ಲಿ ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಲಾಯಿತು. ಈ ವೇಳೆ ಕೆಲಕಾಲ ವಾಹನ ಸಂಚಾರ ಬಂದವಾಯಿತು. ನಂತರ ಪಾದಯಾತ್ರೆ ಟಿಪ್ಪು ಸರ್ಕಲ್ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತಲುಪಿದ್ದು, ಅಲ್ಲಿ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮಠಾಧೀಶರ ಕಿಡಿ :

ಶ್ರೀ ಗುರು ಕೊಟ್ಟೂರೇಶ್ವರ ಮಠದ ಸುಕ್ಷೇತ್ರ ಹರ್ಲಾಪೂರ ಹಾಗೂ ಹಳ್ಳಿಗುಡಿಯ ಶ್ರೀಮಣಿ ಪ್ರಡಾ. ಅಭಿನವ ಕೊಟ್ಟೂರೇಶ್ವರ ಮಹಾಸ್ವಾಮಿಗಳು




ಮಾತನಾಡಿ, "ರಾಜ್ಯ ಸರ್ಕಾರ 420 ಕೋಟಿ ವೆಚ್ಚದಲ್ಲಿ ಮತ್ತೊಮ್ಮೆ ಸಮೀಕ್ಷೆ ನಡೆಸಲು ತೀರ್ಮಾನಿಸಿದೆ. ಆದರೆ ತರಾತುರಿಯಲ್ಲಿ ಜನಗಣತಿ ಮಾಡುವ ದುಸ್ಸಾಹಸ ಮಾಡುತ್ತಿದೆ. ಹಿಂದೂ ಧರ್ಮದಲ್ಲಿ 46ಕ್ಕೂ ಹೆಚ್ಚು ಜಾತಿಗಳಿದ್ದು, ಅವುಗಳ ಪೈಕಿ ಕ್ರಿಶ್ಚಿಯನ್ ಎಂಬ ಕಾಲಂ ಸೇರಿಸಿರುವುದು ಮೋಸ. ಈ ಕಾಲಂ ತೆಗೆದು ಹಾಕುವವರೆಗೂ ಸಮೀಕ್ಷೆ ಮಾಡಬಾರದು," ಎಂದು ಎಚ್ಚರಿಸಿದರು.

ಕಾಲಜ್ಞಾನ ಬ್ರಹ್ಮ ಸದ್ಗುರು ವಿಶ್ವ ಕಾಲಜ್ಞಾನ ಶಿವಯೋಗಿ ಡಾ. ಶರಣಬಸವ ಮಹಾಸ್ವಾಮಿಗಳು (ಕೊಡಿಮಠ, ಗಜೇಂದ್ರಗಡ) ಮಾತನಾಡಿ, "ಸೆಪ್ಟೆಂಬರ್ 22ರಿಂದ 15 ದಿನಗಳ ಕಾಲ ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷೆ ನಡೆಯಲಿದೆ. ಪಟ್ಟಿಯಲ್ಲಿ 1400ಕ್ಕೂ ಹೆಚ್ಚು ಜಾತಿ/ ಉಪಜಾತಿಗಳನ್ನು ಸೇರಿಸಲಾಗಿದೆ. ಆದರೆ

> "ಹಿಂದೂ ಜಾತಿಗಳೊಳಗೆ ಮತಾಂತರಕ್ಕೆ ಕುಮ್ಮಕ್ಕು ಕೊಟ್ಟು ದುರ್ಬಲಗೊಳಿಸುವ ಸಂಚು ಅಡಗಿದೆ. ಸರ್ಕಾರ ಕೂಡಲೇ ಈ ನೀತಿಯನ್ನು ಕೈಬಿಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು."
>
> **ಶ್ರೀ ಸು. ಕೃಷ್ಣಮೂರ್ತಿ,**
> ಸಾಮರಸ್ಯ ವೇದಿಕೆ.

ಹಿಂದೂ ಜಾತಿಗಳೊಳಗೆ ಕ್ರೈಸ್ತ ಹೆಸರನ್ನು ಸೇರಿಸುವ ಮೂಲಕ ಮತಾಂತರಿಗಳಿಗೆ ಮೀಸಲಾತಿ ಕಬಳಿಸುವ ದಾರಿ ಮಾಡಿಕೊಡಲು ಸರ್ಕಾರ ಪ್ರಯತ್ನಿಸುತ್ತಿದೆ. ಇದು ಹಿಂದೂ ಸಮಾಜವನ್ನು ಒಡೆಯುವ ಸಂಚು," ಎಂದು ಸರ್ಕಾರವನ್ನು ಖಂಡಿಸಿದರು.

ಪ್ರತಿಭಟನೆಯಲ್ಲಿ ಮಹಾತಪಸ್ವಿ ಡಾ. ವೀರೇಶ್ವರ ಮಹಾಸ್ವಾಮಿಗಳು (ಅನ್ನದಾನೇಶ್ವರ ಶಾಖಾಮಠ, ನರಸಾಪುರ), ಫಕೀರೇಶ್ವರ ಸ್ವಾಮೀಜಿ (ಸೊರಟೂರ) ಸೇರಿದಂತೆ ಅನೇಕ ಮಠಾಧೀಶರು, ಸಮಾಜ ಮುಖಂಡರಾದ ಸು. ಕೃಷ್ಣಮೂರ್ತಿ, ಹನುಮಂತ ಕಾಳೆ, ರವಿಕಾಂತ ಅಂಗಡಿ, ಗಡ್ಡಿ ಸುರೇಶ್

> "46 ಜಾತಿಗಳ ಕಾಲಂನಲ್ಲಿ ಕ್ರಿಶ್ಚಿಯನ್ ಸೇ-ರಿಸಲಾಗಿದೆ. ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಮತಾಂತರಗೊಂಡವರು ತಮ್ಮ ಮತಾಂತರಗೊಳ್ಳಿದ ಧರ್ಮದಲ್ಲೇ ಸೇರಿಸಬೇಕು. ಯಾವುದೇ ಕಾರಣಕ್ಕೂ ಮೂಲ ಧರ್ಮ ಸೇರಿಸಬಾರದು."
>
> **ರವಿಕಾಂತ ಅಂಗಡಿ,**
> ಅಧ್ಯಕ್ಷರು, ಜಿಲ್ಲಾ ಬಂಜಾರ ಸಮಾಜ.

ಮಳಪ್ಪನವರ್, ವೆಂಕಟೇಶ್ ಕುಲಕರ್ಣಿ (ಬ್ರಾಹ್ಮಣ ಸಮಾಜ), ರವಿ ದಂಡಿನ್ (ಕುರುಬ ಸಮಾಜ), ವಿಜಯಕುಮಾರ್ ಗಡ್ಡಿ (ಪಂಚಮಸಾಲಿ ಸಮಾಜ), ಉಡಚಪ್ಪ ಹಳ್ಳಿಕೇರಿ (ಮಾದಿಗ ಸಮಾಜ), ಸುರೇಶ್ ಚಲವಾದಿ (ಚಲವಾದಿ ಮಹಾಸಭಾ), ಜಗದೀಶ್ ಪೂಜಾರ್ (ವಾಲ್ಮೀಕಿ ಸಮಾಜ), ಶ್ರೀನಿವಾಸ್ ಭಂಡಾರಿ (ಗೊಲ್ಲ ಸಮಾಜ), ಶ್ರೀಪತಿ ಉಡುಪಿ (ಬ್ರಾಹ್ಮಣ ಸಮಾಜ) ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು ಭಾಗವಹಿಸಿದ್ದರು.

## ರೋಟರಿ ಕ್ಲಬ್-ಜೇಂಟ್ಸ್ ಗ್ರುಫ್ ಆಫ್ ಸಖಿ ಸಹೇಲಿಯಿಂದ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರ

# ಕಣ್ಣಿನ ರಕ್ಷಣೆಗೆ ಮೊದಲ ಆದ್ಯತೆ ಇರಲಿ : ಸುಲ್ತಾನಪೂರ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ರೋಟರಿ ಕ್ಲಬ್ ಗದಗ-ಬೆಟಗೇರಿ ಹಾಗೂ ಜೇಂಟ್ಸ್ ಗ್ರುಫ್ ಆಫ್ ಸಖಿ ಸಹೇಲಿ ಗದಗ ಜಿಲ್ಲೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಗದುಗಿನ ರೋಟರಿ ಕ್ಲಬ್ ವೇಲ್ಫೇರ್ ಸೊಸೈಟಿಯಲ್ಲಿ ನೇತ್ರ ತಪಾಸಣೆ ಹಾಗೂ ಕಣ್ಣಿನಲ್ಲಿ ಮಸೂರ ಅಳವಡಿಸುವ ಶಸ್ತ್ರ ಚಿಕಿತ್ಸಾ ಶಿಬಿರವು ಜರುಗಿತು.

205ನೇ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರದ ಪ್ರಾಯೋಜಕತ್ವವನ್ನು ಗದಗ ಜೇಂಟ್ಸ್ ಗ್ರುಫ್ ಆಫ್ ಸಖಿ ಸಹೇಲಿ ಸಂಘಟನೆಯು ವಹಿಸಿಕೊಂಡಿತ್ತು ನಿರಂತರವಾಗಿ ನಡೆಯುತ್ತಿರುವ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ ಕುರಿತಾಗಿ ರೋಟರಿ ವೇಲ್ಫೇರ್ ಸೊಸೈಟಿ ಅಧ್ಯಕ್ಷ ಶ್ರೀಧರ ಸುಲ್ತಾನಪೂರ ಮಾತನಾಡಿ ಕಣ್ಣು ದೇಹದ ಅತ್ಯಂತ ಸೂಕ್ಷ್ಮ ಅಂಗವಾಗಿದ್ದು ಕಣ್ಣಿನ ರಕ್ಷಣೆಗೆ ನಮ್ಮೆಲ್ಲರ ಮೊದಲ ಆದ್ಯತೆ ಇರಲಿ ಗದಗ ಬೆಟಗೇರಿ ರೋಟರಿ ಕ್ಲಬ್ ನಿರಂತರವಾಗಿ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ನಡೆಸುತ್ತಿದ್ದು ಇದು




ಬಡವ ಹಾಗೂ ಮಧ್ಯಮ ವರ್ಗದವರಿಗೆ ವರದಾನವಾಗಿದೆ. ದೃಷ್ಠಿಯು ಸೃಷ್ಠಿಯನ್ನು ನೋಡಲು ಒಳ್ಳೆಯ ಅವಕಾಶವನ್ನು ಇದು ಒದಗಿಸಿಕೊಡುತ್ತಿದೆ ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಜೇಂಟ್ಸ್ ಗ್ರುಫ್ ಆಫ್ ಸಖಿ ಸಹೇಲಿ ಅಧ್ಯಕ್ಷೆ ಸುಮಾ ಪಾಟೀಲ ಮಾತನಾಡಿ ಕಣ್ಣು ಬೆಳಕು ಕಾಣುವ ಜ್ಞಾನೇಂದ್ರೀಯ ನಮ್ಮ ದೇಹದ ತುಂಬಾ ಸೂಕ್ಷ್ಮವಾದ ಅತ್ಯಂತ ಪ್ರಮುಖವಾದ ಭಾಗವೇ ಕಣ್ಣು ಇವುಗಳ ಸದೃಢ ಹಾಗೂ ಆರೈಕೆ ಅತೀ ಮುಖ್ಯವಾಗಿದೆ. ವಿಟ್ಯಾಮಿನ್ ಸಿ ಇರುವ ಆಹಾರ ಪದಾರ್ಥಗಳ ಸೇವನೆಯಿಂದ ಕಣ್ಣಿನ ಪೊರೆ ಬರುವದನ್ನು ತಡೆಗಟ್ಟಬಹುದು ಮುಖ್ಯವಾಗಿ ತಜ್ಞ ವೈದ್ಯರ ಭೇಟಿ ಸೂಕ್ತ ಚಿಕಿತ್ಸೆ ಮೂಲಕ ಕಣ್ಣಿನ ರಕ್ಷಣೆ ಮಾಡಿಕೊಳ್ಳಬೇಕು ಎಂದರು.

ರೋಟರಿ ಕ್ಲಬ್‌ನ ಕಾರ್ಯದರ್ಶಿ ಸುರೇಶ ಕುಂಬಾರ ಮಾತನಾಡಿ ರೋಟರಿ ಸಂಸ್ಥೆಯು ನಿರಂತರವಾಗಿ ನಡೆಸುತ್ತಿರುವ ಕಣ್ಣಿನ ಚಿಕಿತ್ಸೆ ಪಡೆದ ಸಾವಿರಾರು ಫಲಾನುಭವಿಗಳು ಇಂದು ಆರೋಗ್ಯದಿಂದ ಇದ್ದು ಉತ್ತಮ ದೃಷ್ಠಿ ಹೊಂದಿದ್ದಾರೆ. ನುರಿತ ವೈದ್ಯರ ತಂಡ ಕ್ಲಬ್‌ನಲ್ಲಿ ಸಹಕಾರ ಮನೋಭಾವನೆಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಅಶ್ವಿನಿ ಮಾದಗುಂಡಿ, ಶಶಿಕಲಾ ಮಾಲಿಪಾಟೀಲ, ಮಾಧುರಿ ಮಾಳೆಕೊಪ್ಪ, ಅನುರಾಧಾ ಅಮಾತ್ಯೆಗೌಡರ, ಚಂದ್ರಕಲಾ ಸ್ಥಾವರಮಠ, ಸುಶ್ಮೀತಾ ವೇರ್ಣೆಕರ, ನಿರ್ಮಲಾ ಪಾಟೀಲ, ರೇಖಾ ರೊಟ್ಟಿ, ಮಧು ಕರಬಿಷ್ಠಿ, ಸುಗ್ಗಲಾ ಯಳಮಲಿ, ಶ್ರೀದೇವಿ ಮಹೇಂದ್ರಕರ, ಬಾಲಕೃಷ್ಣ ಕಾಮತ, ಡಾ.ಪ್ರದೀಪ ಉಗಲಾಟ, ಡಾ.ವಿನಯ ಟೀಕಾರೆ ಮುಂತಾದವರಿದ್ದರು.

ಶಿವಾಚಾರ್ಯ ಹೊಸಳ್ಳಿಮಠ ಸ್ವಾಗತಿಸಿದರು ಡಾ.ಆರ್.ಜಿ.ಉಪ್ಪಿನ ನಿರೂಪಿಸಿದರು ಕೊನೆಗೆ ಚಂದ್ರಶೇಖರ ಹುಣಶೀಕಟ್ಟಿ ವಂದಿಸಿದರು. ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ರುದ್ರೇಶ, ನೇತ್ರಾ, ಜ್ಯೋತಿ ದೊಡ್ಡಮನಿ, ದೀಪಾ, ಆನಂದ ಶಿಂಗ್ರಿ, ಸಹಾಯಕರಾಗಿ ಸೇವೆ ಸಲ್ಲಿಸಿದರು.

# ಬೆಸ್ತರ ಜಾತಿ ಗಣತಿಯಲ್ಲಿ ಬೆಸ್ತರು ಬರೆಯಿಸಿ

ಗದಗ 18: ರಾಜ್ಯದ ಹಲವು ಕಡೆಗಳಲ್ಲಿ 37 ಹೆಸರುಗಳಿಂದ ಕರೆಯಲ್ಪಡುವ ಅಂಬಿಗರ ಸಮಾಜ ಬಾಂಧವರು ಸಂಘಟಿತರಾಗಬೇಕಿದೆ. ಪ್ರತಿಯೊಬ್ಬರೂ ನಮ್ಮ ಜನಾಂಗದ ಇತಿಹಾಸ, ಕುಲಕಸುಬು ಮತ್ತಿತರೆ ಮಾಹಿತಿಯನ್ನು ತಿಳಿದುಕೊಂಡು ಜಾಗೃತರಾಗಬೇಕಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದಲ್ಲಿ ಸೆ. 22-09-2025 ರಿಂದ ಅಕ್ಟೋಬರ್ 7ರವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2025 ನಡೆಸುತ್ತಿದೆ. ಗಣತಿದಾರರು ಪ್ರತಿಯೊಂದು ಮನೆಗೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಅಂಬಿಗ ಕುಲಬಾಂಧವರಿಗೆ ಸರಿಯಾದ ಮಾಹಿತಿ ನೀಡಬೇಕಿದೆ.

ಕುಟುಂಬದ ವಿವರ, ಮುಖ್ಯಸ್ಥರ ಮಾಹಿತಿ, ಆಧಾರ ಸಂಖ್ಯೆ, ವಿದ್ಯಾರ್ಹತೆ, ಉದ್ಯೋಗ, ಧರ್ಮ, ಜಾತಿ, ಉಪಜಾತಿ, ಮಾತೃಭಾಷೆ, ವೈವಾಹಿಕ ಮಾಹಿತಿ ಮುಂತಾದ ವಿವರಗಳನ್ನು ಗಣತಿದಾರರಿಗೆ ನೀಡುವ ಮೂಲಕ ಸಹಕರಿಸಬೇಕು.

ಕಲಂ ನಂ. 9 ರ ಜಾತಿ ಕಲಂನಲ್ಲಿ 'ಬೆಸ್ತರ್' ಎಂದು ಬರೆಸಬೇಕು. ಕಲಂ ನಂ. 10 ರಲ್ಲಿ ಉಪಜಾತಿ ಕಲಂನಲ್ಲಿ 'ನೀವು, ನಿಮ್ಮ ಕುಟುಂಬದ, ಮಕ್ಕಳ ಜಾತಿ ಪ್ರಮಾಣದಲ್ಲಿನ ಜಾತಿಯ ಹೆಸರು' ನಮೂದಿಸಬೇಕು. ಕಲಂ ನಂ. 11 ರಲ್ಲಿ ಜಾತಿಗೆ ಇರುವ ಇನ್ನಿತರೆ ಪರ್ಯಾಯ ಹೆಸರುಗಳ ಮುಂದೆ ಬಾರ್ಕಿ, ಕುಬ್ಬೇರ, ಗಂಗಾಮತ, ಅಂಬಿಗ, ಸುಣಗಾರ ಎಂಬ ಹೆಸರುಗಳನ್ನು ಬರೆಸಬಹುದು.

ವಿ.ಸೂ. ಸಮೀಕ್ಷೆಯ ಸಂದರ್ಭದಲ್ಲಿ ಏನಾದರೂ ನ್ಯೂನತೆಗಳು ಹಾಗೂ ವ್ಯತ್ಯಾಸಗಳು ಮತ್ತು ಮನೆಗಳಿಗೆ ಜನಗಣತಿ ಸ್ಟಿಕ್ಕರ್ ಅಂಟಿಸದಿದ್ದಲ್ಲಿ ತಕ್ಷಣ ಹಿಂದುಳಿದ ವರ್ಗಗಳ ಆಯೋಗದ ಸಹಾಯವಾಣಿ 8050770004 ಗೆ ಕರೆ ಮಾಡಿ, ನೀವು ಗಣತಿದಾರರಿಗೆ ಈ ಮಾಹಿತಿ ನೀಡುವುದರಿಂದ ಸರ್ಕಾರ ರೂಪಿಸುವ ಯೋಜನೆಗಳ ಪ್ರಯೋಜನ ಪಡೆಯಬಹುದು. ಈ ಸಮೀಕ್ಷೆ ನಮ್ಮ ಸಮಾಜದ ಏಳಿಗೆಗೆ ಕಾರ್ಯಸೂಚಿಯಾಗಲಿದೆ ಎಂದು ಗದಗ ಜಿಲ್ಲಾ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ವಿವಿಧೋದ್ದೇಶಗಳ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಜೆ. ಬಿ. ಗಾರವಾಡರವರು ಹಾಗೂ ಜಿಲ್ಲೆಯ ಎಲ್ಲಾ ತಾಲೂಕ ಅಧ್ಯಕ್ಷರು ಹಾಗೂ ಸರ್ವ ಪದಾಧಿಕಾರಿಗಳನ್ನು ಪ್ರಕಟಣೆಯ ಮೂಲಕ ತಿಳಿಸಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ : 9448640866 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

# ಗದಗ ಜಿಲ್ಲೆಗೆ ನೇಮಕಗೊಂಡ ಬಿಷಪ್‌ಗಳ ದೀಕ್ಷೆ ಮತ್ತು ಸನ್ಮಾನ ಕಾರ್ಯಕ್ರಮ



❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ಪ್ರೊಟೆಸ್ಟಂಟ್ ಕ್ರೈಸ್ತರ ಮಹಾಸಭಾ (ಡಿಎಪಿಸಿ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹೊಸ ಜಿಲ್ಲಾ ಬಿಷಪ್‌ಗಳನ್ನು ಹಾಗೂ ಆಯ್ದು ತಾಲೂಕಗಳಿಗೆ ಸಹಾಯಕ ಬಿಷಪ್‌ಗಳನ್ನು ನೇಮಿಲಾಯಿತು.

ಹೊಸದಾಗಿ ನೇಮಕಗೊಂಡು ಬಿಷಪ್‌ಗಳ ದೀಕ್ಷೆ ಮತ್ತು ಸನ್ಮಾನ ಕಾರ್ಯಕ್ರಮ ಬೆಂಗಳೂರು ಹಡಸನ್ ಮೆಮೋರಿಯಲ್ ಕಮ್ಯೂನಿಟಿ ಹಾಲ್‌ನಲ್ಲಿ ಮೆಟ್ರೊಪಾಲಿಟನ್ ಆರ್ಚಬಿಷಪ್ ರೆ॥ ಡಾ॥ ಆಮೋಸ್ ಸಿಂಗ್ ಅವರ ಪ್ರಧಾನ ಸೇವಾ ಕಾರ್ಯದಲ್ಲಿ ಭವ್ಯವಾಗಿ ನೆರವೇರಿಸಲಾಯಿತು. ದೀಕ್ಷಾ ಕಾರ್ಯಕ್ರಮದ ನಿರೂಪಣೆಯನ್ನು ಕ್ಯಾಮ್ಪಸ್ ಕ್ರುಸೇಡ್ ಮೈಸೂರು ನಿರ್ದೇಶಕ ಸಹೋ॥ ಸ್ಯಾಮ್ ವರ್ಗೀಸ್ ನಿರ್ವಹಿಸಿದ್ದರು. ಟೆಬರ್ನಾಕಳ್ ಚರ್ಚು ರೆ॥ ಸಾಮುವೆಲ್ ವರ್ಗೀಸ್, ಅಸೆಂಬ್ಲೀಸ್ ಆಫ್ ಗಾಡ ರೆ॥ ಜಾರ್ಜ ಕುಟ್ಟಿ ದೀಕ್ಷಾ ಕಾರ್ಯಕ್ರಮದಲ್ಲಿ ಸಹಾಯಕ ಸೇವೆಯನ್ನು ನೆರವೇರಿಸಿದರು. ಈ ದಿನ ಪಂಜಾಬ್, ಒರಿಸ್ಸಾ, ಕರ್ನಾಟಕ ಹಾಗೂ ತಮಿಳುನಾಡು ಆರ್ಚ ಬಿಷಪ್ಗಳನ್ನು ನೇಮಿಸಲಾಯಿತು.

ದೀಕ್ಷೆಯ ನಂತರ, ಕರ್ನಾಟಕದ ಆರ್ಚಬಿಷಪ್ ರೆ॥ ವಿನೋದ ಎಂ. ಚಾಕೋ ಅವರ ಅಧ್ಯಕ್ಷತೆಯಲ್ಲಿ ಪವಿತ್ರ ಸಿನಡ್ ಸಭೆ ನಡೆಯಿತು. ಈ ಸಭೆಯಲ್ಲಿ ಮಹಾಸಭೆಯ ಪ್ರಮುಖ ನಿರ್ಣಯಗಳನ್ನು ಪ್ರಾರ್ಥನೆಯ ಮನೋಭಾವದಲ್ಲಿ ಚರ್ಚಿಸಿ ಏಕಮತದಿಂದ ಅಂಗೀಕ-ರಿಸಲಾಯಿತು. ಕೌನ್ಸಿಲ್ ಕಾರ್ಯದರ್ಶಿ ಬಿಷಪ್ ಮೋಸಸ್ ನಿರೂಪಿಸಿ ವಂದಿಸಿದರು.

ಕರ್ನಾಟಕದಲ್ಲಿ ಪ್ರೊಟೆಸ್ಟಂಟ್ ಕ್ರೈಸ್ತರ ಮಹಾಸಭೆಯ ಧ್ಯೇಯ ಮತ್ತು ಆಧ್ಯಾತ್ಮಿಕ ನಾಯಕತ್ವವನ್ನು ಮತ್ತಷ್ಟು ಬಲಪಡಿಸುವುದಕ್ಕೆ ಕಾರಣವಾಗಿದೆ. ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಬಿಷಪ್ ಆಗಿ ಆಯ್ಕೆಯಾಗಿರುವ ರೆ॥ ಸುನೀಲ ವಿ. ಜೇಕಬ್‌ರವರು ಮತ್ತು ಆರ್ಚ ಬಿಸಪ್ ರೆವ. ವಿನೋದ ಚಾಕೋ ಮಾತನಾಡಿ ಪ್ರೊಟೆಸ್ಟೆಂಟ್ ಕ್ರೈಸ್ತರ ಮಹಾಸಭಾ ಡಿಎಪಿಸಿಯು ಎಲ್ಲಾ ಪ್ರೊಟೆಸ್ಟಂಟ್ ಸಭೆಗಳ ಪರವಾಗಿ ಧ್ವನಿ ಎತ್ತುವ ಭರವಸೆಯನ್ನು ನೀಡಿದರು.

ಗದಗ ಜಿಲ್ಲಾ ಬಿಷಪ್ ಮತ್ತು ಸಹಾಯಕ ಬಿಷಪ್‌ಗಳ ವಿವರ ಗದಗ ಜಿಲ್ಲಾ ನೂತನ ಬಿಷಪ್ ಆಗಿ ರೆ॥ ಫ್ರಾನ್ಸಿಸ್ ಕ್ಸೇವಿಯರ್ ರೆ, ರೆ॥ ಶಕ್ತಿವೆಲ್ ಆರ್.ಗಜೇಂದ್ರಗಡ, ರೆ॥ ಸುರೇಶ್ ಇಮ್ಯಾನುಯೆಲ್ ರೋಣ, ರೆ॥ ಜೇಮ್ಸ ಕುರಿ-ಶಿರಹಟ್ಟಿ, ರೆ॥ ನಾಗಪ್ಪ ಅರಭಾವಿ-ನರಗುಂದ, ರೆ॥ನಾಮದೇವ ಗದಗ, ರೆ॥ ಕರಿಬಸಪ್ಪ ಮುಂಡರಗಿ, ರೆ॥ ಗಣೇಶ ನಾಯ್ಕ-ಲಕ್ಷ್ಮೇಶ್ವರ ಈ ಪ್ರಕಾರ ನೇಮಕ ಮಾಡಲಾಗಿರುತ್ತದೆ. ಚರ್ಚನ ಆಧ್ಯಾತ್ಮಿಕ ಮತ್ತು ಆಡಳಿತಾತ್ಮಕ ಅಗತ್ಯಗಳನ್ನು ಪೂರೈಸಲು, ಕ್ರೈಸ್ತ ಸಮಾಜದ ಮುಖಂಡರು ಮತ್ತು ನಾಯಕರು ಮತ್ತು ವಿಶ್ವಾಸಿಗಳ ಯೋಗಕ್ಷೇಮಕ್ಕಾಗಿ ಹಾಗೂ ಸಾಮಾಜಿಕ, ಶೈಕ್ಷಣಿಕ ಬೆಳವಣಿಗಾಗಿ ಶ್ರಮಿಸುವ ಉದ್ದೇಶವಾಗಿದೆ.

ಅವರ ಅಧಿಕಾರ ವ್ಯಾಪ್ತಿಗೆ ಬಿಷಪ್‌ನ ಕಚೇರಿಗೆ ಅವರನ್ನು ನೇಮಕ ಮಾಡಲಾಗಿರುತ್ತದೆ ಎಂದು ರೆ॥ಡಾ॥ ವಿನೋದ ಎಮ್. ಚಾಕೋ ಆರ್ಚಬಿಷಪ್ ಡಿಎಪಿಸಿ ಕರ್ನಾಟಕ ಇವರು ತಿಳಿಸಿದ್ದಾರೆ.

# ಗುರುವಿಗೆ ಶರಣಾದರೆ ಜೀವನ ಸಾರ್ಥಕ : ಪ್ರೊ. ಕಸ್ತೂರಿ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ತಾಯಿ, ತಂದೆ, ಗುರು ಪ್ರತಿಯೊಬ್ಬರ ಜೀವನದಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಾರೆ. ಒಳ್ಳೆಯ ಸಂಸ್ಕಾರ ನೀಡಿ, ಮಾನವೀಯ ಮೌಲ್ಯ ತಿಳಿಸುತ್ತಾರೆ. ಈ ಮೂವರನ್ನು ಯಾವಾಗಲೂ ಗೌರವಿಸಬೇಕು ಎಂದು ಗದುಗಿನ ಸರ್ಕಾರಿ ಪ್ರಥಮದರ್ಜೆ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಕಸ್ತೂರಿ ದಳವಾಯಿ ತಿಳಿಸಿದರು.

ನಗರದ ಕೆ.ಎಲ್.ಇ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ಜರುಗಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ತಮ್ಮ ಮುಂದಿನ ಭವಿಷ್ಯಕ್ಕಾಗಿ ಉತ್ತಮ ಜೀವನ ಮೌಲ್ಯಗಳನ್ನು ತಿಳಿದು ಮೌಲ್ಯಾಧಾರಿತ ಬದುಕು ತಮ್ಮದಾಗಿಸಿಕೊಳ್ಳಬೇಕು. ಹಿರಿಯರಿಗೆ ಗೌರವ ನೀಡುವ, ಅವರ ಹೇಳಿದ ಬುದ್ಧಿ ಮಾತುಗಳನ್ನು ಕೇಳಿ ಕಲಿಯಬೇಕು. ಕಲಿತ ವಿದ್ಯಾಲಯಕ್ಕೂ ಹೆತ್ತವರಿಗೂ ಕೀರ್ತಿ ತರಬೇಕು. ಕಲಿಕೆಯು ನಿರಂತರ ಪ್ರಕ್ರಿಯೆಯಾಗಿದ್ದು, ಉತ್ತಮ ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಇದರಿಂದ ಜ್ಞಾನದ ವಿಕಾಸ ಆಗುವುದು. ಶೈಕ್ಷಣಿಕವಾಗಿ ಪದವಿ ಪೂರ್ವ ಹಂತ ಪ್ರತಿಯೊಬ್ಬ ವಿದ್ಯಾರ್ಥಿಗೂ ಅತ್ಯಂತ ಮಹತ್ವದ ಮತ್ತು ಜೀವನ ತಿರುವಿನ ಘಟ್ಟ. ಈ ಹಂತದಲ್ಲಿ ಸತತ ಅಧ್ಯಯನ ಮಾಡಿ ಉತ್ತಮ ಜ್ಞಾನ ಹಾಗೂ ಅಂಕ ಪಡೆದರೆ ಬದುಕಿಗೊಂದು ಭದ್ರ ಬುನಾದಿ ಹಾಕಿದಂತೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ರಜನಿ ಪಾಟೀಲ ಮಾತನಾಡಿ ಗುಣಮಟ್ಟದ ಶಿಕ್ಷಣ ಎಂದರೆ ಹೆಚ್ಚು ಅಂಕಗಳನ್ನು ಪಡೆದು ಉದ್ಯೋಗಕ್ಕೆ ಸೇರುವುದಲ್ಲ. ಬದಲಿಗೆ ಬದುಕಿನಲ್ಲಿ ಮೌಲ್ಯ ಮತ್ತು ಆದರ್ಶಗಳನ್ನು



ಕಲಿಯುವುದಾಗಿದೆ. ಆದರೆ ಇಂದಿನ ದಿನಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ಕಾಣಲಾಗುತ್ತಿಲ್ಲ. ನಮ್ಮ ಪೂರ್ವಜರು ಮೌಲ್ಯ ಮತ್ತು ಗೌರವಕ್ಕಾಗಿ ಬದುಕಿದವರು. ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಲು, ಆದರ್ಶ ಬದುಕನ್ನು ಕಟ್ಟಿಕೊಳ್ಳಲು, ಶಿಸ್ತನ್ನು ರೂಢಿಸಿಕೊಳ್ಳಲು ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆಗಳು ಸಹಕಾರಿಯಾಗಲಿವೆ. ಹಿಂದೆ ಶಿಕ್ಷಣ ಪಡೆಯಲು ಯಾವುದೇ ಸೌಲಭ್ಯಗಳು ಇರಲಿಲ್ಲ. ಆದರೆ ಇಂದು ಶಿಕ್ಷಣ ಪಡೆಯಲು ಸಾಕಷ್ಟು ಸೌಲಭ್ಯ ಮತ್ತು ಅವಕಾಶಗಳಿವೆ. ನಮಗೆ ಸಿಕ್ಕಿರುವ ಅವಕಾಶ ಮತ್ತು ಸೌಲಭ್ಯಗಳನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡು ಉತ್ತಮ ವಿದ್ಯಾರ್ಥಿಗಳಾಗಬೇಕು. ತರಗತಿಯ ಪಾಠದೊಂದಿಗೆ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಮ್ಮಲ್ಲಿರುವ ಪ್ರತಿಭೆ ಪ್ರದರ್ಶಿಸಬೇಕು. ಇದರ ಜೊತೆಗೆ ವೇದಿಕೆ ಮೇಲೆ ನಿರರ್ಗಳವಾಗಿ ಮಾತನಾಡುವ ಹವ್ಯಾಸವನ್ನು ಬೆಳಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲರನ್ನು ಪ್ರಾಚಾರ್ಯ ಡಾ. ಶ್ರೀಮತಿ ಎ. ಕೆ. ಮಠ ಸ್ವಾಗತಿಸಿದರು. ಡಾ. ವೀಣಾ ಈ ಅತಿಥಿಗಳನ್ನು ಪರಿಚಯಿಸಿದರು. ಸೋನಿಯಾ ಘೋಡ್ಕೆ ಮತ್ತು ಸಹನಾ ಪ್ರಾರ್ಥಿಸಿದರು. ಶೃತಿ ಅಳಗೊಂಡಿ, ಸಹನಾ ಹಿರೇಮಠ ನೃತ್ಯ ಕಾರ್ಯಕ್ರಮ ನೀಡಿದರು. ಕಳೆದ ವರ್ಷ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಡಾ. ವಿಠ್ಠಲ ಕೋಳಿ ವಿದ್ಯಾರ್ಥಿ ಒಕ್ಕೂಟ ಪರಿಚಯಿಸಿದರು. ಮೇಘಾ ಮುದ್ದಿ, ಗಾಯತ್ರಿ ಮಾದಗುಂಡಿ, ಕೀರ್ತಿ ಕಲಬುರ್ಗಿ ಮಹಾವಿದ್ಯಾಲಯದ ಕುರಿತಾಗಿ ತಮ್ಮ ಸಿಹಿ ಅನುಭವಗಳನ್ನು ಹಂಚಿಕೊಂಡರು. ಪ್ರೊ. ವಿಶಾಲ ತೆಳಗಡೆ ವಂದಿಸಿದರು. ಮಹಾವಿದ್ಯಾಲಯದ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಎಲ್ಲ ವಿದ್ಯಾರ್ಥಿ ವೃಂದ ಹಾಜ-ರಿದ್ದರು.

## ಜೆ.ಟಿ.ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಹಿಂದಿ ದಿನಾಚರಣೆ

# ಹಿಂದಿ ಭಾಷೆಯು ಸರಳ ಸುಂದರ ಮತ್ತು ಅಭಿಮಾನದ ಭಾಷೆಯಾಗಿದೆ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ಹಿಂದಿ ಭಾಷೆ ನಮ್ಮ ದೇಶಮಾತೆಯ ಬಿಂದಿ (ಸಿಂಧೂರ) ಯಾಗಿದ್ದಾಳೆ, ಭಾರತವು ಅನೇಕ ಭಾಷೆಗಳ ತವರಾಗಿದ್ದರೂ ಹಿಂದಿ ಭಾಷೆಯು ಮಹತ್ವವನ್ನು ಪಡೆದುಕೊಂಡಿದೆ. ಅಟಲ್ ಬಿಹಾರಿ ವಾಜಪೇಯಿ ಅವರು ಹಿಂದಿಯನ್ನು ರಾಷ್ಟ್ರಭಾಷೆ ಎಂದು ಕರೆದಿದ್ದಾರೆ. ಭಾರತದಲ್ಲಿ ಅನೇಕ ಭಾಷೆಗಳಿದ್ದರೂ ಹಿಂದಿಯು ಸುಂದರ ಭಾಷೆಯಾಗಿದೆ ಎಂದು ವ್ಹಿ.ಡಿ.ಎಸ್.ಟಿ. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಬಿ.ಎಸ್.ರಾಠೋಡ್ ಹೇಳಿದರು. ಮುಂದುವರೆದು ಹಿಂದಿ ಭಾಷೆಯು ಸರಳ ಸುಂದರ ಮತ್ತು ಅಭಿಮಾನದ ಭಾಷೆಯಾಗಿದ್ದು, ನಮ್ಮ ದೇಶದಲ್ಲಿ ಸೈನಿಕರು, ರೈತರು, ಶಿಕ್ಷಕರಿಗಳಿಗೆ ನೀಡಿದಷ್ಟೆ ಪ್ರಾಮುಖ್ಯತೆಯನ್ನು ಹಿಂದಿ ಭಾಷೆಗೂ ಮಹತ್ವ ನೀಡಬೇಕೆಂದು ಕರೆನೀಡಿದರು. ಹಿಂದಿ ಭಾಷೆಯ ಭಾರತದಲ್ಲಿ ಬಹುಸಂಖ್ಯಾತ ಜನರು ಹಿಂದಿಯನ್ನು ಸಂವಹನ ಭಾಷೆಯಾಗಿ ಬಳಸುತ್ತಿದ್ದಾರೆ, ಸ್ವತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಹಿಂದಿ ಭಾರತೀಯರನ್ನು ಒಟ್ಟುಗೂಡಿಸುವ ಸ್ಫೂರ್ತಿದಾಯಕ ಭಾಷೆಯಾಗಿ ಹೊರಹೊಮ್ಮಿತು. ಹಿಂದಿ ಭಾರತದ ಅತಿ ಪ್ರಾಚೀನ ಭಾಷೆಯಾಗಿದ್ದು, ಪ್ರಾಚೀನ ಕಾಲದಲ್ಲಿ ಕಬೀರದಾಸ, ಸೂರದಾಸ, ಜಾಯಸಿ ಇವ-ರಿಂದ ಹಿಡಿದು ಆಧುನಿಕ ಕಾಲದಲ್ಲಿ ಪ್ರೇಂಚಂದ, ದಿನಕರ್ ಮುಂತಾದ ಶ್ರೇಷ್ಟ ಕವಿಗಳು ಹಿಂದಿ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿ ಹಿಂದಿ ಭಾಷೆ ಜಾಗತಿಕವಾಗಿ ಬೆಳೆಯಲು ಕಾರಣರಾಗಿದ್ದಾರೆ ಎಂದು ಹೇಳಿ, ಹಿಂದಿಯನ್ನು ಮಾತೃ ಭಾಷೆಯಷ್ಟೆ ಗೌರವಿಸಬೇಕೆಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆ.ಟಿ. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಎಸ್.ಬಿ.ಹಾವೇರಿ ಅವರು ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಕಲಿಯುತ್ತೇವೆ. ಅದೇ ರೀತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಹಿಂದಿಯನ್ನು ಕಲಿಯಲು ಅವಕಾಶವಿರುತ್ತದೆ ಎಂದು ಹೇಳಿದರು. ಶ್ರೇಯಾ ಹಿರೇಮಠ ಅವರ ಪ್ರಾಥ-ರ್ನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸ್ನೇಹಾ ಕೊಂಡಗೂಳಿ ಅವರು ಸರ್ವರನ್ನು ಸ್ವಾಗತಿಸಿದರು. ಶ್ವೇತಾ ಮೆರವಾಡೆ ವಂದಿಸಿದರು. ವಿದ್ಯಾರ್ಥಿನಿ ಷಹನಾಜ್ ಹಿರೇಮನಿ ಕಾರ್ಯಕ್ರಮ ನಿರೂಪಿಸಿದರು. ವೇದಿಕೆ ಮೇಲೆ ಹಿಂದಿ ವಿಭಾಗದ ಗಂಗಾಧರ ಶೀರ್ಕೆ ಉಪಸ್ಥಿತಿತರಿದ್ದರು.

## ಸೆ.22 ರಿಂದ ಅಡವೀಂದ್ರಸ್ವಾಮಿಮಠದ 45ನೇ ವರ್ಷದ

# ದಸರಾ ಮಹೋತ್ಸವ-ಘಟಸ್ಥಾಪನೆ ಮತ್ತು ಶ್ರೀದೇವಿ ಪುರಾಣ ಪ್ರಾರಂಭೋತ್ಸವ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ನಗರದ ಮುಳಗುಂದನಾಕಾ ಬಳಿಯ ಶ್ರೀಅಡವೀಂದ್ರಸ್ವಾಮಿ ಮಠದಲ್ಲಿ 45ನೇ ವರ್ಷದ ದಸರಾ ಮಹೋತ್ಸವ ಹಾಗೂ ಘಟಸ್ಥಾಪನೆ ಮತ್ತು ಶ್ರೀದೇವಿ ಪುರಾಣ ಪ್ರಾರಂಭೋತ್ಸವ ಮತ್ತು ಶ್ರೀಅನ್ನಪೂರ್ಣೇಶ್ವರಿದೇವಿ ಮಹಾರಥೋತ್ಸವ ಕಾರ್ಯಕ್ರಮಗಳು ಸೆ.22 ರಿಂದ ಅಕ್ಟೋಬರ್ 3 ರವರೆಗೆ ಜರುಗಲಿವೆ ಎಂದು ಶ್ರೀಅನ್ನಪೂರ್ಣೇಶ್ವರಿದೇವಿ ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಸದಾಶಿವಯ್ಯ ಎಸ್. ಮದರಿಮಠ ಹೇಳಿದರು.

ನಗರದ ಮುಳಗುಂದನಾಕಾ ಬಳಿಯ ಶ್ರೀಅಡವೀಂದ್ರಸ್ವಾಮಿ ಮಠದಲ್ಲಿ ಗುರುವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸೆ.22 ರಂದು ಮುದೇನೂರ ಶಶಿಧರ ಮಹಾಸ್ವಾಮಿಗಳವ ಕೃಪಾಶೀರ್ವಾದಿಂದ ಶಮಿ, ಆರಿ, ಬಿಲ್ವ ವೃಕ್ಷಗಳ ಸಂಗಮದ ಪವಿತ್ರ ಸ್ಥಳದಲ್ಲ ಸ್ಥಾಪಿಸಲ್ಪಟ್ಟ ಶ್ರೀಅನ್ನಪೂಣೇಶ್ವರಿಯ ಸನ್ನಿಧಿಯಲ್ಲಿ 45ನೇ ವರ್ಷದ ಶ್ರೀದೇವಿ ಪುರಾಣ ಪ್ರವಚನ ಪ್ರಾರಂಭೊತ್ಸವ ಜರುಗಲಿದೆ. ಡಾ.ರಾಜಗುರು ಗುರುಸ್ವಾಮಿ ಕಲಕೇರಿ ಪುರಾಣ ಪ್ರವಚನ ಮಾಡುವರು, ಚನ್ನಬಸಯ್ಯ ಶಾಸ್ತ್ರಿಗಳು ಹೇಮಗಿರಿಮಠ ಪುರಾಣ ಪಠಣ ಮಾಡುವರು ಎಂದರು.

ಸೆ.22 ರಂದು ಸೋಮವಾರ ಮುಂಜಾನೆ 9 ಗಂಟೆಗೆ ಧರ್ಮ ಧ್ವಜಾರೋಹಣವನ್ನು ಶ್ರೀಅಡವೀಂದ್ರಸ್ವಾಮಿ ಮಠದ ಧರ್ಮದರ್ಶಿಗಳಾದ ಮಹೇಶ್ವರ ಸ್ವಾಮಿಗಳವರ ಸಮ್ಮುಖದಲ್ಲಿ ಹಿರೇವಡ್ಡಟ್ಟಿಯ ವೀರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ನೆರವೇರಿಸುವರು. ಸಂಜೆ 6.30ಕ್ಕೆ ಘಟಸ್ಥಾಪನೆ ಹಾಗೂ ಶ್ರೀದೇವಿ ಪುರಾಣ ಪ್ರಾರಂಭೋತ್ಸವವನ್ನು ಶ್ರೀಗುರು ಅಭಿನವ ಮೃತ್ಯುಂಜಯ ಸ್ವಾಮೀಜಿ ಸಾನಿಧ್ಯದಲ್ಲಿ ಶುಭ್ ಜುವೆಲ್ಲರ್ಸ್ ಮಾಲೀಕರಾದ



ಶ್ರೀಮತಿ ಪೂಜಾ ಕಿರಣ ಭೂಮಾ ಹಾಗೂ ದತ್ತಾ ಪ್ರಾಪರ್ಟಿಸ್ ವ್ಯವಸ್ಥಾಪಕರಾದ ಕಿರಣ ಪ್ರಕಾಶ ಭೂಮಾ ಉದ್ಘಾಟಿಸುವರು ಎಂದು ಅವರು ಹೇಳಿದರು.

ಸೆ.23 ಸಂಜೆ 6.30ಕ್ಕೆ ಶ್ರೀದೇವಿಗೆ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಲಿದ್ದು, ಸೆ.24 ಹಾಗೂ ಸೆ.25 ರಂದು ಸಂಜೆ 6.30 ಗಂಟೆಗೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಸೆ.26 ರಂದು ಸಂಜೆ 6.30 ಗಂಟೆಗೆ ಶ್ರೀದೇವಿಗೆ ಹಾಗೂ ಮುತ್ತೈದೆಯರಿಗೆ ಅರಿಷಿಣ, ಕುಂಕುಮ, ಬಳೆ ಸೇವೆ ಜರುಗಲಿದೆ. ಸೆ.27 ರಂದು ಸಂಜೆ 6.30 ಗಂಟೆಗೆ ಧಾರ್ಮಿಕ ಕಾರ್ಯಕ್ರಮ, ಸೆ.28 ರಂದು ಮುಂಜಾನೆ 10 ಗಂಟೆಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ಡಾ. ವೀರೇಶ ದ್ಯಾವಣ್ಣರ ಹಾಗೂ ಅಭಿಷೇಕ ಹೊಸಳ್ಳಿಮಠ ಅವರ ತಂಡದಿಂದ ಜರುಗಲಿದೆ. ಸೆ.28 ರಿಂದ 30ರವರೆಗೆ ಪ್ರತಿದಿನ ಸಂಜೆ 6.30ಕ್ಕೆ ಧಾರ್ಮಿಕ ಕರ್ಯಕ್ರಮಗಳು ಜರುಗಲಿದೆ ಎಂದರು.

ಅಕ್ಟೋಬರ್ 1 ರಂದು ಸಂಜೆ 6.30ಕ್ಕೆ ಆಯುಧಪೂಜೆ, ಕುಮಾರಿ ಪೂಜೆ ಹಾಗೂ ಶ್ರೀದೇವಿ ಪುರಾಣ ಮಂಗಲೋತ್ಸವ ಜರುಗಲಿದೆ. ಅ.2 ರಂದು ಮುಂಜಾನೆ 9ಕ್ಕೆ ಗದಗ ಶ್ರೀರೇಣುಕಾಚಾರ್ಯ ಮಂದಿರದಿಂದ ಭವ್ಯ ಮೆರವಣಿಗೆ ಮೂಲಕ ತೇರಿನ ಕಳಸ ಆಗಮನ, ಮುಂಜಾನೆ 10ಕ್ಕೆ ಕಳಸಾರೋಹಣ ಪೂಜ್ಯಶ್ರೀಗಳವರಿಂದ ಜರುಗುವುದು. ಮುಂಜಾನೆ 11ಕ್ಕೆ ವಿಜಯದಶಮಿ ಬನ್ನಿಮುಡಿಯುವ ಕಾರ್ಯಕ್ರಮ ಜರುಗಲಿದೆ ಎಂದರು.

ಅ.3 ರಂದು ಮುಂಜಾನೆ 7.15ಕ್ಕೆ ಗದಗ ಒಕ್ಕಲಗೇರಿ ಶ್ರಿರಾಯಚೋಟಿ ವಿರಭದ್ರೇಶ್ವರ ದೇವಸ್ಥಾನದಿಂದ ಕುಂಭೋತ್ಸವ ಹೊರಡುವುದು. ಮುಂಜಾನೆ 9.30ಕ್ಕೆ ಶ್ರೀ ಅನ್ನಪೂಣೇಶ್ವರಿದೇವಿಗೆ ಹಾಗೂ ಕರ್ತೃ ಗದ್ದುಗೆಗೆ ಕುಂಬಾಭಿಷೇಕ, ಮಧ್ಯಾಹ್ನ 12ಕ್ಕೆ ಪುಣ್ಯಸ್ವರಣೋತ್ಸವ, ಮಹಾ ಪ್ರಸಾದ ಜರುಗಲಿದೆ. ಮಧ್ಯಾಹ್ನ3.30ಕ್ಕೆ ತೇರಿನಹಗ್ಗ ಮುಳಗುಂದ ರಸ್ತೆಯ ಜಗದಂಭಾ ದೇವಸ್ಥಾನದಿಂದ ಶ್ರೀಮಠಕ್ಕೆ ಆಗಮಿಸುವುದು. ಸಂಜೆ 5ಕ್ಕೆ ಶ್ರೀಅನ್ನಪೂರ್ಣೇಶ್ವರಿದೇವಿ ಮಹಾರಥೋತ್ಸವ ಕನಕಗಿರಿಯ ಸುವರ್ಣಗಿರಿ ಸಂಸ್ಥಾನಮಠದ ಶ್ರೀನಿರಂಜನಪ್ರಭು ಚನ್ನಮಲ್ಲ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಸಕಲ ಸದ್ಭಕ್ತ ಮಹಿಳೆಯರಿಂದ ಜರುಗುವುದು. ಸಂಜೆ 7ಕ್ಕೆ ಜಾನಪದ ವಿದ್ವಾಂಸರಾದ ಡಾ.ಶಂಭು ಬಳಿಗಾರ ಅವರಿಂದ ಜಾನಪದ ಜೀವನ ದರ್ಶನ ಕಾರ್ಯಕ್ರಮ ಜರುಗಲಿದೆ. ಅ.4 ರಂದು ಸಂಜೆ 6.30ಕ್ಕೆ ಕಡುಬಿನ ಕಾಳಗ ಪುರವಂತರ ಸಮ್ಮುಖದಲಲಿ ವಾಧ್ಯ ವೈಭವದೊಂದಿಗೆ ಜರುಗುವುದು ಎಂದು ಅವರು ಹೇಳಿದರು.

ಶ್ರೀಅನ್ನಪೂರ್ಣೇಶ್ವರಿದೇವಿ ಜಾತ್ರಾ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷರಾದ ಎಸ್.ಪಿ. ಸಂಶಿಮಠ, ಪ್ರಧಾನ ಕಾರ್ಯದರ್ಶಿ ಶರಣಬಸಪ್ಪ ಎಸ್. ಗುಡಿಮನಿ, ಸಹಕಾರ್ಯದರ್ಶಿ ಗುರುಬಸವಲಿಂಗ ದಾನಪ್ಪ ತಡಸದ, ಕೋಶಾಧ್ಯಕ್ಷರಾದ ವಿರುಪಣ್ಣ ಬಳ್ಳೊಳ್ಳಿ, ಮಹಿಳಾ ಸಮಿತಿ ಅಧ್ಯಕ್ಷರಾದ ಸುವರ್ಣಾ ಎಸ್. ಮದರಿಮಠ, ಕಾರ್ಯದರ್ಶಿ ಗೀತಾ ವಿ. ಹೂಗಾರ, ಸಹಕಾರ್ಯದರ್ಶಿ ಸುಷ್ಮಾ ಎಸ್. ಖಂಡಪ್ಪಗೌಡ್ರ, ಕೋಶಾಧ್ಯಕ್ಷರಾದ ಅಶ್ವಿನಿ ಎಸ್. ನೀಲಗುಂದ, ವೀರೇಶ ಕೂಗು, ಕಸ್ತೂರಿಬಾಯಿ ಭಾಂಡಗೆ, ವಿನೋದ ಭಾಂಡಗೆ, ರಾಜು ಕುರಡಗಿ, ವಿ.ಎಚ್. ದೇಸಾಯಿಗೌಡ್ರ ಪತ್ರಿಕಾಗೋಷ್ಠಿಯಲ್ಲಿದ್ದರು.

## ಪ್ರವಾದಿ ಮುಹಮ್ಮದ್ ಪ್ರವಚನ ಸೀರತ್ ಅಭಿಯಾನ 2025

# ಪ್ರವಾದಿ ಮೊಹಮ್ಮದ್ ನ್ಯಾಯದ ಹರಿಕಾರ ಹಾಗೂ ಪುಸ್ತಕ ಬಿಡುಗಡೆ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ಜಮಾತ್ ಇಸ್ಲಾಮಿ ಹಿಂದ್ ಗದಗ ಆಯೋಜಿಸಿದ್ದ ಸೀರತ ಅಭಿಯಾನ ಪ್ರವಚನ ಹಾಗೂ ಪ್ರವಾದಿ ಮುಹಮ್ಮದ್ (ಸ) ಪುಸ್ತಕ ಬಿಡುಗಡೆ ಮಾಡಿದರು. ಅತಿಥಿಗಳಾಗಿ ಆಗಮಿಸಿದ್ದ ಮೋಹನ್ ಭಜಂತ್ರಿ ಮಾತನಾಡಿ ಮುಸ್ಲಿಂ ಧರ್ಮದಲ್ಲಿ ಯಾವ ತರ ನಡೆಯಬೇಕು ಎಂದು ಪ್ರವಾದಿ ಅವರು ಹೇಳಿದ್ದು ಅದನ್ನು ಮುಂದೆ ಬುದ್ಧ, ಬಸವ, ಅಂಬೇಡ್ಕರ್ ಅವರು ಹೇಳಿದ್ದು ಅದನ್ನೇ ನಮಗೆ ಸಂವಿಧಾನ ನೀಡಿದವರು ಬಾಬಾಸಾಹೇಬ ಅಂಬೇಡ್ಕರ್ ಅವರ ಮಾರ್ಗವನ್ನು ಯಾವತ್ತು ಬಿಡಬಾರದು.

ಸಂವಿಧಾನ ಇಲ್ಲ ಅಂದ್ರೆ ಜೀವನ ಮಾಡೋವುದು ಕಷ್ಟ ಆಗುತ್ತದೆ ಎಂದು ಹೇಳುತಾ ಮಾತನ್ನು ವಿರಾಮಗೊಳ್ಳಿಸಿದರು. ರಾಜೇಶೇಖರ ಜೆ. ಕಲ್ಲೂರು ಅವರು ಮಾತನಾಡಿ ಮಹಿಳೆಯ ಮತ್ತು ಪುರುಷ ಕಾಪಾಡಲು ಮಾನವ ಕುಲಕ್ಕೆ ಸಮಾನತೆ ಇಸ್ಲಾಮಿನಲ್ಲಿ ಮಾತ್ರ ಇದೆ. ಇಸ್ಲಾಂ ಕ್ಯಾಲೆಂಡರ್ ಬಗ್ಗೆ ಮಹಿಳೆಯರ ಬಗ್ಗೆ ಕಾಳಜಿಯನ್ನು ಹೊಂದಿಕೊಂಡದರು ಪ್ರವಾದಿ ಅವರು ಎಂದು ಮಾತನಾಡಿದರು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ ಜನಾಬ್‌ಲಾಲ್ ಹುಸೇನ್ ಕಂದಗಲ್ ಅವರು ಪ್ರವಾದಿ ಮುಹಮ್ಮದ್ ಪೈಗಂಬರ್‌ರವರ ಜೀವನ ಕುರಿತು ಸವಿಸ್ತಾರವಾಗಿ ಎಳೆ ಎಳೆಯಾಗಿ ಬಿಡಿಸಿ ಕನ್ನಡಕ್ಕೆ ಅನುವಾದ ಮಾಡಿ ಹೇಳಿದರು. ಕಂಪು ಬಿಳುಪು ಬಣ್ಣದ ಬಗ್ಗೆ ಮಹಮದ್ ಪೈಗಂಬರ್‌ರವರ ಸಮಾನತೆ ಇಸ್ಲಾಮಿನಲ್ಲಿ ಮಾತ್ರ ಇದೆ ಎಂದರು."ಪ್ರವಾದಿ ಮುಹಮ್ಮದ(ಸ್ವ) ರನ್ನು ಅರಿಯಿರಿ" ಅಬ್ದುಲ್ ಹಮೀದ್ ಜಾಸಿಮ್ ಅಲ್ ಬಿಲಾಲಿ "ಭಾರತೀಯ ಸಮಾಜದಲ್ಲಿ ಪ್ರವಾದಿ ಮುಹಮ್ಮದ(ಸ್ವ)ರ ಆದರ್ಶದ ಔಚಿತ್ಯ" ಫೌಝಿಯಾ ಪುತ್ತಿಗೆ ಶಾಂತಿ ಪ್ರಕಾಶನದ ಬಿಡುಗಡೆ.

ಈ ಸಂದರ್ಭದಲ್ಲಿ ಕುರ್‌ಆನ್ ಪಠಣ: ಜನಾಬ ಸ್ವಾಜಾ ಹುಸೇನ್ ಬಿಲ್ಲಿವಾಲೆ, ಉಪಾಧ್ಯಕ್ಷರು ಜಮಾಅತೆ



ಇಸ್ಲಾಮಿ ಹಿಂದ್, ಗದಗ ಕುರ್‌ಆನ್ ಅನುವಾದ : ಜನಾಬ ಮೆಹಬೂಬಬಾಷಾ ಎಸ್ ಸೈಯದ ಇವರಿಂದ ಸ್ವಾಗತ ಭಾಷಣ : ಪ್ರೋ ಹುಸೇನ್‌ಬಾಷಾ ಕರನೂಲ್ ರವರಿಂದ ಜರುಗಿತು.

ಪ್ರಾಸ್ತಾವಿಕ ಭಾಷಣ: ಜನಾಬ ಮುನ್ನಾ ಕಲ್ಮಮನಿ. ಅಧ್ಯಕ್ಷರು ಎಪಿಸಿಆರ್, ಗದಗ ಇವರಿಂದ ಗಣ್ಯಮಾನ್ಯರಿಂದ ಪುಸ್ತಕ ಲೋಕಾರ್ಪಣೆ ಸೀರತ ಪ್ರವಚನ, ಜನಾಬ ಬಾಬಹುಸೇನ ಕಂದಗಲ್ ಇವರಿಂದ ಅಧ್ಯಕ್ಷರ ಭಾಷಣ : ಜನಾಬ ಕೆ ಆಯ್ ಶೇಖ, ಅಧ್ಯಕ್ಷರು ಜ ಇ ಹಿಂದ, ಗದಗ, ಜನಾಬ ಅಬ್ದುಲ್ ಜಬ್ಬಾರ್ ಖವಾಸ ಅರ್ಪಿಸಿದರು, ನಿಕಟಪೂರ್ವ ಅಧ್ಯಕ್ಷರು, ಜ ಇ ಹಿಂದ, ಗದಗ ಹಾಗೂ ಕೆ ಐ ಶೇಕ್, ಖಾಜಾ ಹುಸೇನ್ ಬಿಲ್ಲಿವಾಲೆ, ಮುನ್ನ ಕಲ್ಮನಿ ಹರಿಯ ಶೇಕ್ ಮಹಮ್ಮದ್ ಗೌಸ್ ಮುಕಾಂದರ್ ಮೆಹಬೂಬ್ ಬಾಷಾ ಕರ್ನೂಲ್ ಹರ್ಷದ್ ಬಿಲ್ಲಿವಾಲೆ ಮೆಹಬೂಬ್ ಸೈಯದ್, ಜೆ ಹೆಚ್ ಉಮಚಗಿ ರಾಜ್ ಅಹ್ಮದ್ ಇಲಕಲ್ಲ, ಖಾಜಿಸಾಹೇಬ್, ಯುನೂಸ ಬಿಪೇರಿ, ಸಂಪತ್ ಹೆಬಸೂರ್, ಎಮ್ ಹೆಚ್ ಉಮಚಗಿ, ಮೊಹಮ್ಮದ್ ಶಫಿ ನಾಗರಕಟ್ಟಿ, ಜಾಫರ್ ಡಾಲಾಯತ, ನಾಸಿರ್ ಚಿಕ್ಕೇನಕೊಪ್ಪ, ಬಸಲಿಂಗಪ್ಪ ಮುಂಡರಗಿ, ಮಾಜಿ, ಆರಿಫ್ ಮಕಾದಾರ್ ಸೈನಿಕರು, ಕಟ್ಟಡ ಕಾರ್ಮಿಕರು, ವೈದ್ಯರು, ನ್ಯಾಯವಾದಿಗಳು, ಕುತುಬುಬುದ್ದಿನ್ ಸರ್ವರ್, ಹೆಚ್ ಹೆಚ್ ಉಮಚಗಿ, ಮುಂತಾದವರು ಉಪಸ್ಥಿತರಿದ್ದರು ಮೊಹ್ಮದ್ ಯೂಸುಫ್ ಮುಲ್ಲಾ ನಿರೂಪಣೆ ಮಾಡಿ ಕಾರ್ಯಕ್ರಮ ಮುಕ್ತಾಯ ಮಾಡಿದರು.

## ಕಸಾಪ: 'ಮಹಾಮಾತು' ಕಾರ್ಯಕ್ರಮ

# ವಚನ ಸಾಹಿತ್ಯಕ್ಕೆ ಷಣ್ಮುಖ ಶಿವಯೋಗಿಗಳ ಕೊಡುಗೆ ಅಪಾರ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ಕನ್ನಡ ನಾಡಿನ ಶರಣರು ಸಾಮಾಜೋಧಾರ್ಮಿಕ ವಿಚಾರಗಳನ್ನು ಮುನ್ನೆಲೆಗೆ ತಂದು ವೈಯಕ್ತಿಕ ಉನ್ನತಿಗೆ ಜೊತೆಗೆ ಸಮಾಜೋನ್ನತಿಗೆ ಶ್ರಮಿಸಿದ್ದಾರೆ. ಹದಿನೇಳನೆ ಶತಮಾನದಲ್ಲಿ ಷಣ್ಮುಖ ಶಿವಯೋಗಿಗಳು ಭಕ್ತಿ, ಜ್ಞಾನ, ವೈರಾಗ್ಯದ ಮೂಲಕ ಸಮಾಜದಲ್ಲಿರುವ ಅಸಮಾನತೆಯನ್ನು ತೊಡೆದು ಹಾಕಿ ಜಾತಿ, ಮತ , ಪಂಥಗಳಲ್ಲಿ ಸಾಮರಸ್ಯವನ್ನು ಮೂಡಿಸಲು ಪ್ರಯತ್ನಿಸಿದರು ಎಂದು ಪಿ.ಪಿ.ಜಿ. ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ರಾಜಶೇಖರ ದಾನರಡ್ಡಿ ತಿಳಿಸಿದರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಸಂಶೋಧನಾ ಕೃತಿಗಳ ಪರಿಚಯ ಮಾಲಿಕೆಯಲ್ಲಿ ತಮ್ಮ ಸಂಶೋಧನಾ ಗ್ರಂಥದ ಕುರಿತು ಉಪನ್ಯಾಸ ನೀಡಿದರು. ಬಸವಾದಿ ಶರಣರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದು ಸುಮಾರು ಎಂಟುನೂರು ವಚನಗಳನ್ನು ರಚಿಸಿದ್ದಾರೆ. ಅವರ ವಚನಗಳಲ್ಲಿ ತತ್ವ, ಯೋಗ, ಮತ್ತು ಭಕ್ತಿಯ ಅಗಾಧತೆಯನ್ನು ಕಾಣಬಹುದಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಡಾ. ಬಿ.ಬಿ.ಹೊಳಗುಂದಿ ಅವರು ಮಾತನಾಡಿ, ಜಾಗತಿಕ ಇತಿಹಾಸದಲ್ಲಿ ಕನ್ನಡ ನಾಡಿನ ಕೊಡುಗೆ ಅಪಾರವಾಗಿದೆ. ಶರಣರು ಸಮಸಮಾಜ ನಿರ್ಮಾಣದ ಕನಸನ್ನು ಹೊಂದಿ ಮೂಢನಂಬಿಕೆಗಳನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಸಾರ್ವಕಾಲಿಕವಾಗಿರುವ ಅವರ ಚಿಂತನೆಗಳನ್ನು ನಾವಿಂದು ಮೈಗೂಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅವರು ಮಾತನಾಡಿ, ತೀರಾ ವೈಯಕ್ತಿಕವೆನಿಸುವ ಆಧ್ಯಾತ್ಮಿಕ ವಿಚಾರಗಳನ್ನು ಬಹು ಜನರಿಗೆ ತಿಳಿಸಿ ಸಾಮಾಜೀಕರಣಗೊಳಿಸಿ ಶೋಷಣೆ ಮುಕ್ತ




ಸಮಾಜಕ್ಕೆ ಶಿವಯೋಗಿಗಳು ಪ್ರಯತ್ನಿಸಿದರು. ವಚನಗಳ ವಿಚಾರಗಳನ್ನು ಅಧ್ಯಯನ ಮಾಡಿ, ಅಳವಡಿಕೊಂಡು, ಆಚರಿಸಿದರೆ ಮತ್ತೆ ಕಲ್ಯಾಣ ರಾಜ್ಯ ನೆಲೆಗೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರಾದ ನೇಮಕಗೊಂಡಿರುವ ಹಿನ್ನೆಲೆಯಲ್ಲಿ ಜೆ.ಪಿ. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಿ.ಬಿ.ಹೊಳಗುಂದಿ ಅವರನ್ನು ಸನ್ಮಾನಿಸಲಾಯಿತು.

ರಾಹುಲ ಗಿಡ್ನಂದಿ ನಿರೂಪಿಸಿದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಶಶಿಕಾಂತ ಕೊರ್ಲಹಳ್ಳಿ ವಂದಿಸಿದರು. ಈರನಗೌಡ ಮಣಕವಾಡ ಅವರು ವಚನಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಚಂದ್ರಶೇಖರ ವಸ್ತ್ರದ, ರತ್ನಕ್ಕ ಪಾಟೀಲ, ಸಿ.ಕೆ.ಎಚ್. ಕಡಣಿಶಾಸ್ತ್ರೀ, ಡಾ. ಜಿ.ಬಿ. ಪಾಟೀಲ, ಸೈಯದ್ ಉಸ್ಮಾನ ಕೊಪ್ಪಳ, ಶಿವಾಜಿ ಕಾಂಬಳೇಕರ, ಸಿದ್ಧಲಿಂಗೇಶ ಸಜ್ಜನಶೆಟ್ಟರ, ಮಲ್ಲಪ್ಪ ಡೋಣಿ, ನಾಗಪ್ಪ ಸುರಳಿಕೇರಿ, ಶೈಲಜಾ ಗಿಡ್ನಂದಿ, ರತ್ನಾ ಪುರಂತರ, ರಶ್ಮಿ ಅಂಗಡಿ, ಅಂದಾನಯ್ಯ ಹಿರೇಮಠ, ಜಯದೇವ ಮೆಣಸಗಿ, ಕುಬೇರಪ್ಪ ಗದಗ, ಕೆ.ಎಸ್.ಗುಗ್ಗರಿ, ಸಿ.ಎಂ.ಮಾರನಬಸರಿ, ರಾಜಶೇಖರ ಕರಡಿ, ಕೆ.ಎಸ್.ಬಾಳಿಕಾಯಿ, ಎಸ್.ಎಸ್.ಪತ್ತಾರ, ಪಿ.ವಿ.ಇನಾಮದಾರ, ಚನವೀರಪ್ಪ ದುಂದೂರ, ಗಂಗಪ್ಪ ಮುದಗಲ್, ಬಿ.ಎಸ್.ಹಿಂಡಿ, ಅನ್ನದಾನಿ ಹಿರೇಮಠ, ದೇವೇಂದ್ರ ನಾಯಕ, ಪೃಥ್ವಿರಾಜ ಚವ್ಹಾಣ, ಎಸ್.ಎಲ್. ಕುಲಕರ್ಣಿ, ಕೆ.ಜಿ.ವ್ಯಾಪಾರಿ, ಅಶೋಕ ಸತ್ಯರೆಡ್ಡಿ, ಬಸವರಾಜ ತೋಟಗೇರ, ಎಂ.ಬಿ.ವಾಲ್ಮೀಕಿ, ಎಂ.ಆರ್. ನಾಯ್ಕ, ಶ್ರೀಕಾಂತ ಜಾಧವ, ಕೃಷ್ಣಾಜಿ ನಾಡಗೇರ, ಬಿ.ಎಲ್.ಚವ್ಹಾಣ, ಸತೀಶ ಚನ್ನಪ್ಪಗೌಡರ, ಡಿ.ಎಸ್.ಬಾಪುರಿ, ದತ್ತಪ್ರಸನ್ನ ಪಾಟೀಲ ಮೊದಲಾದವರು ಭಾಗವಹಿಸಿದ್ದರು.

# ಅರ್ಜಿ ಆಹ್ವಾನ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ/ ಬೆಂಗಳೂರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು / ಬೆಳಗಾವಿ ನ್ಯಾಯಾಲಯಗಳಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಅಧಿಕಾರಿಗಳನ್ನು ಎದುರುದಾರರನ್ನಾಗಿಸಿ ದಾಖಲಾಗುವ ರಿಟ್ ಅರ್ಜಿಗಳನ್ನು ನಿರ್ವಹಿಸಲು ಆಯಾ ನ್ಯಾಯಾಲಯಗಳಲ್ಲಿ ಖಾಯಂ ಸದಸ್ಯ ನೋಂದಣಿಯಾಗಿರುವ, ಜಿಲ್ಲಾ ಪಂಚಾಯತಿ ಹಾಗೂ ಇತರೆ ವಿವಿಧ ಕಚೇರಿಗಳ ಪರವಾಗಿ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಿದ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಹಾಗೂ ಗ್ರಾಮ ಪಂಚಾಯತಿ ಪರವಾಗಿ ಪ್ರಕರಣಗಳನ್ನು ನಿರ್ವಹಿಸಿದ ಬಗ್ಗೆ ಕನಿಷ್ಟ 5 ವರ್ಷಗಳ ಅನುಭವ ಹೊಂದಿರುವ ವಕೀಲರನ್ನು ನೇಮಿಸಿಕೊಳ್ಳುವ ಕುರಿತು ನ್ಯಾಯವಾದಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿದಾರರು ತಮ್ಮ ಹೆಸರು, ವಯಸ್ಸು, ವಿದ್ಯಾರ್ಹತೆ, ಅನುಭವ, ವಿವಿಧ ಕಚೇರಿಗಳ ಪರವಾಗಿ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಿದ ವಿವರದ ಕುರಿತು ಆಯಾ ಕಚೇರಿಯಿಂದ ಪಡೆದ ಪ್ರಮಾಣ ಪತ್ರ ಸಲ್ಲಿಸಬೇಕು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ಹಾಗೂ ಗ್ರಾಮ ಪಂಚಾಯತ್ /ತಾಲೂಕು ಪಂಚಾಯತ್/ ಜಿಲ್ಲಾ ಪಂಚಾಯತ್‌ಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ವಾದ ಮಂಡಿಸಿದ ಬಗ್ಗೆ ವಿವರ ಸಲ್ಲಿಸಬೇಕು. ಕನಿಷ್ಟ 10 ರಿಂದ 15 ವರ್ಷ ನ್ಯಾಯಾಲಯದ ಕಾರ್ಯಕಲಾಪಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ಪಡೆದ ಪ್ರಮಾಣಪತ್ರ ಅಥವಾ ನೋಂದಣಿ ಪ್ರಮಾಣ ಪತ್ರ ಸಲ್ಲಿಸುವುದು. ಆಸಕ್ತ ನ್ಯಾಯವಾದಿಗಳು ತಮ್ಮ ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿ ಅರ್ಜಿಯನ್ನು ಜಿಲ್ಲಾ ಪಂಚಾಯತಿ ಕಾರ್ಯಾಲಯಕ್ಕೆ ಸೆಪ್ಟೆಂಬರ್ 26 ರೊಳಗೆ ಸಲ್ಲಿಸಬೇಕು. ಮಾಹಿತಿಯನ್ನು zpgadag.karnataka.gov.inನಲ್ಲಿ ವೀಕ್ಷಿಸಬಹುದಾಗಿದೆ ಎಂದು ಗದಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ರೇಬಿಸ್ ರೋಗ ನಿರೋಧಕ ಲಸಿಕಾ ಕಾರ್ಯಕ್ರಮ

❑ ಸ್ನೇಹಜೀವಿ ನ್ಯೂಸ್

ಗದಗ, ಸೆ. 18 : ವಿಶ್ವ ರೇಬಿಸ್ ದಿನಾಚಾರಣೆಯ ಅಂಗವಾಗಿ ರೋಟರಿ ಸಂಸ್ಥೆ ಗದಗ-ಬೆಟಗೇರಿ ಹಾಗೂ ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇವುಗಳ ಸಂಯುಕ್ತಾಶ್ರಯದಲ್ಲಿ ಗದಗ-ಬೆಟಗೇರಿ ನಗರದ ಸಾರ್ವಜನಿಕರ ಸಾಕು ಪ್ರಾಣಿಗಳಿಗೆ ಉಚಿತ ರೇಬಿಸ್ ರೋಗ ನಿರೋಧಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವು ಸೆ. 20 ರಂದು ಮುಂಜಾನೆ 10 ಗಂಟೆಗೆ, ಶ್ರೀಮತಿ ಉಷಾದೇವಿ ಜಿ. ಕುಷ್ಟಗಿ ರೋಟರಿ ಕಮ್ಯೂನಿಟಿ ಕೇರ್ ಸೆಂಟರ್, (ರೋಟರಿ ಐ ಕೇರ್ ಸೆಂಟರ್), ಕೆ.ಹೆಚ್. ಪಾಟೀಲ ಜಿಲ್ಲಾ ಕ್ರೀಡಾಂಗಣದ ಎದುರಿಗೆ, ರೇಬಿಸ್ ರೋಗ ನಿರೋಧಕ ಲಸಿಕೆಯನ್ನು ಸಾಕು ಪ್ರಾಣಿಗಳಿಗೆ ಉಚಿತವಾಗಿ ನೀಡಲಾಗುವುದು.

ಗದಗ ಬೆಟಗೇರಿಯ ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆಯಲು ಸಂಸ್ಥೆಯ ಅಧ್ಯಕ್ಷ ಡಾ. ರಾಜೇಂದ್ರ ಗಚ್ಚಿನಮಠ, ಕಾರ್ಯದರ್ಶಿ ಸುರೇಶ ಎಸ್. ಕುಂಬಾರ ಹಾಗೂ ಖಜಾಂಚಿ ರೊ. ಬಾಲಕೃಷ್ಣ ಕಾಮತ್, ಪಶುವೈದ್ಯಕೀಯ ಮಹಾವಿದ್ಯಾಲಯದ ಪ್ರಧ್ಯಾಪಕರಾದ ರೊ. ಡಾ. ವಿಜಯ ಟಿಕಾರೆ ವಿನಂತಿಸಿದ್ದಾರೆ.

# ತರಬೇತಿಗಾಗಿ ಆಯ್ಕೆ-ಅರ್ಜಿ ಆಹ್ವಾನ

ಗದಗ, ಸೆ. 18 : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ತರಬೇತಿಗೆ ಆಯ್ಕೆ ಮಾಡಬೇಕಾಗಿದ್ದು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಹಾಗೂ ಅರ್ಹ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ಭರ್ತಿ ಮಾಡಿದ ಅರ್ಜಿಯನ್ನು ಗದಗ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಅಕ್ಟೋಬರ್ 15 ರಂದು ಸಂಜೆ 5 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 208, ಹುಬ್ಬಳ್ಳಿ ರಸ್ತೆ, ಗದಗ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

# ಜೀವಿತಾವಧಿ ಪ್ರಮಾಣ ಪತ್ರವನ್ನು ಸಲ್ಲಿಸಿ

ಗದಗ, ಸೆ. 18 : ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಅವರ ಸುತ್ತೋಲೆಯಂತೆ ಮಾಸಾಶನ ಹಾಗೂ ವಿಧವಾ ಮಾಸಾಶನ ಪಡೆಯುತ್ತಿರುವ ಸಾಹಿತಿ, ಕಲಾವಿದರು ಪ್ರತಿ 6 ತಿಂಗಳಿಗೊಮ್ಮೆ ಜೀವಿತಾವಧಿ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಸೂಚನೆ ಇರುತ್ತದೆ, ಗದಗ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುತ್ತಿರುವ ಸಾಹಿತಿ, ಕಲಾವಿದರು ಅಕ್ಟೋಬರ್ 30 ರೊಳಗಾಗಿ ಜೀವಿತಾವಧಿ ಪ್ರಮಾಣ ಪತ್ರದೊಂದಿಗೆ, ಆಧಾರ ಕಾರ್ಡ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಬ್ಯಾಂಕ್ ಪಾಸ್‌ಬುಕ್ ಪ್ರತಿಯನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಠಡಿ ಸಂಖ್ಯೆ:103 ಜಿಲ್ಲಾಡಳಿತ ಭವನ ಗದಗ ಕಚೇರಿಗೆ ಸಲ್ಲಿಸುವುದು ಹೆಚ್ಚಿನ ಮಾಹಿತಿಗಾಗಿ ದೂರವಾಣಿ:08372-221864 ಗೆ ಸಂಪರ್ಕಿಸಬಹುದಾಗಿದೆ

# ಹುಬ್ಬಳ್ಳಿಯಲ್ಲಿ ಏಕತಾ ಸಮಾವೇಶ, ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ



❑ ಸ್ನೇಹಜೀವಿ ನ್ಯೂಸ್

**ಹುಬ್ಬಳ್ಳಿ: ಜಾತಿಗಣತಿಯಲ್ಲಿ ವೀರಶೈವ ಲಿಂಗಾಯತ ಎಂಬುದಾಗಿ ನಮೂದಿಸಬೇಕು ಎಂದು ಸಮಸ್ತ ಲಿಂಗಾಯತ–ರಿಗೆ ಕರೆ ಕೊಡುವ ಉದ್ದೇಶದಿಂದ 'ವೀರಶೈವ ಲಿಂಗಾಯತ ಏಕತಾ ರ್‍ಯಾಲಿ' ಶುಕ್ರವಾರ ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ನಡೆಯಲಿದೆ.**

ಧರ್ಮದ ಕಾಲಂನಲ್ಲಿ ಏನು ಬರೆಸಬೇಕು ಎನ್ನುವ ಅಂಶದ ಬಗ್ಗೆ ಸಮುದಾಯದಲ್ಲಿ ಹಲವಾರು ಭಿನ್ನ ಧ್ವನಿಗಳು ಈಗ ಕೇಳಿ ಬರುತ್ತಿವೆ.ಹುಬ್ಬಳ್ಳಿ ಸೇರಿದಂತೆ ರಾಜ್ಯದ ವಿವಿಧೆಡೆ ಈಗಾಗಲೇ ನಡೆದಿರುವ ಅನೇಕ ಉಪ ಜಾತಿಗಳ ಸಭೆಗಳಲ್ಲಿ 'ಹಿಂದೂ' ಎಂದು ಬರೆಸುವ ಬಗ್ಗೆ ಅನೇಕ ಅಪಸ್ವರಗಳು ಕೇಳಿ ಬಂದಿವೆ.

ಪ್ರತಿಪಕ್ಷ ಬಿಜೆಪಿಯ ವೀರಶೈವ –ಲಿಂಗಾಯತ ನಾಯಕರು 'ಧರ್ಮದ ಕಾಲಂನಲ್ಲಿ ಹಿಂದೂ ಎಂಬುದಾಗಿ ಬರೆಸಿ; ಜಾತಿ – ಉಪಜಾತಿ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂಬುದಾಗಿ ಬರೆಸಿ' ಎಂದು ಸೂಚಿಸಿದ್ದಾರೆ. ಪಕ್ಷದ ಈ ತೀರ್ಮಾನವನ್ನು ಹುಬ್ಬಳ್ಳಿಯಲ್ಲಿ ನಡೆದ ಪ್ರಮುಖ ಸಭೆಯಲ್ಲಿ ಪ್ರತಿಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ವಿವರಿಸಿದ್ದಾರೆ. ಬಿಜೆಪಿಯ ಇತರ ಲಿಂಗಾಯತ ನಾಯಕರೂ ಈ ಅಂಶದ ಬಗ್ಗೆ ಸ್ಪಷ್ಟವಾಗಿ ಮಾತನಾಡಿದ್ದಾರೆ.

ಗುರು–ವಿರಕ್ತರಿಬ್ಬರೂ ಒಂದೇ ವೇದಿಕೆಯಲ್ಲಿ ಸೇರಲಿರುವ ರ್‍ಯಾಲಿಯಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದು ಸಂಘಟಕರು ತಿಳಿಸಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭೆ ಹಾಗೂ ವಿರಕ್ತ ಪರಂಪರೆಯ ಸ್ವಾಮೀಜಿಗಳು ಏರ್ಪಡಿಸಿರುವ ಸಮಾವೇಶದಲ್ಲಿ ಪಂಚಾಚಾರ್ಯರು, ವೀರಶೈವ ಮಹಾಸಭೆಯ ಪ್ರಮುಖ ಪದಾಧಿಕಾರಿಗಳು,ವಿರಕ್ತ ಪರಂಪರೆಯ ಮಠಾಧೀಶರು,ರಾಜಕೀಯ ಕ್ಷೇತ್ರಗಳ ಗಣ್ಯರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಆದರೆ ಸಮಾಜ ಬಾಂಧವರಲ್ಲಿ ಈ ಬಗ್ಗೆ ಇನ್ನೂ ಒಮ್ಮತದ ಭಾವನೆ ಮೂಡಿಲ್ಲ. ಹೀಗಾಗಿ ಧರ್ಮದ ಕಾಲಂನಲ್ಲಿ ಹಿಂದೂ ಎಂದು ನಮೂದಿಸದೇ ಇದ್ದವರು 'ಇತರೇ' ಎಂಬುದಾಗಿ (ಇತರೆಗೆ ಬೇರೆ ಕಾಲಂ ಇದೆ) ನಮೂದಿಸಬೇಕು ಎನ್ನುವ ಚರ್ಚೆಯೂ ರ್‍ಯಾಲಿಯ ಪೂರ್ವದಲ್ಲಿ ಜೋರಾಗಿ ನಡೆದಿದೆ.

**"ವೀರಶೈವ ಲಿಂಗಾಯತ ಏಕತಾ ರ್‍ಯಾಲಿ" ಮಹತ್ವ ಪಡೆದುಕೊಂಡಿದ್ದು, ಯಾವ ನಿರ್ಣಯಕ್ಕೆ ಬರಲಿದೆ ಎನ್ನುವ ಕುತೂಹಲ ಮೂಡಿದೆ. ಎಂಟು ವರ್ಷಗಳ ಹಿಂದೆ ಇದೇ ಮೈದಾನದಲ್ಲಿ ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಆಗ್ರಹಿಸಿ ರಾಜ್ಯ ಮಟ್ಟದ ಭಾರೀ ರ್‍ಯಾಲಿ ನಡೆದುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.**

## ವೀರಶೈವ ಲಿಂಗಾಯತ ಏಕತಾ ಸಮಾವೇಶ ಬರುವ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ

❑ ಸ್ನೇಹಜೀವಿ ನ್ಯೂಸ್

**ಹುಬ್ಬಳ್ಳಿ: ವಿಐಪಿ ಪಾರ್ಕಿಂಗ್ ವ್ಯವಸ್ಥೆ ಮಹಿಳಾ ಕಾಲೇಜ,ಈಶ್ವರಿ ವಿಶ್ವವಿದ್ಯಾಲಯ ಹತ್ತಿರ ಜೆ ಸಿ ನಗರ,ಜಿಎಸ್‌ಡಬ್ಲ್ಯೂ ಸಿಮೆಂಟ್ ಗುಡಾನ ಪಾಕಿಂ–ರ್ಗ್ ವ್ಯವಸ್ಥೆ ಮಾಡಲಾಗಿದೆ.**

ಗದಗ್ ರಸ್ತೆ ಕಡೆ ಬರುವ ವಾಹನಗಳಿಗೆ ಚಿಟಗುಪ್ಪಿ ಆಸ್ಪತ್ರೆ ಸರ್ಕಲ್ ನಲ್ಲಿ ಸಾರ್ವಜರಿ ಜನಿಕರನ್ನು ಇಳಿಸಿ ಎಂ ಟಿ ಎಸ್ ಕಾಲೋನಿ ಗ್ರೌಂಡ್ ವಿಕಾಸ್ ನಗರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.ನವಲಗುಂದ ಕಡೆಇಂದ ಬರುವ ವಾಹನಗಳಿಗೆ ಚಿಟಗುಪ್ಪಿ ಆಸ್ಪತ್ರೆ ಸರ್ಕಲ್ ಬಳಿ ಇಳಿಸಿ ಎಂಟಿ–ಎಸ್. ಕಾಲೋನಿ ಗ್ರೌಂಡ್ ವಿಕಾಸ ನಗರ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.


ಕಾರವಾರ ರೋಡ್ ಕಡೆಯಿಂದ ಬರುವ ವಾಹನಗಳಿಗೆ ಚಿಟಗುಪ್ಪಿ ಆಸ್ಪತ್ರೆ ಸರ್ಕಲ್ ಬಳಿ ಸಾರ್ವಜನಿಕರನ್ನು ಇಳಿಸಿ ರೈಲ್ವೆ ಮೈದಾನ– ಚಿಲ್ಲಿ ಗ್ರೌಂಡ್ ಗದಗ್ ರಸ್ತೆಯಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.


ಪಿ ಬಿ ರಸ್ತೆಯಲ್ಲಿ ಬರುವ ವಾಹನಗಳಿಗೆ ಚನ್ನಮ್ಮ ಸರ್ಕಲ್ ಮೇಲೆ ಚಿಟಗುಪ್ಪಿ ಆಸ್ಪತ್ರೆ ಸರ್ಕಲ್ ಬಳಿ ಬಂದು ಸಾರ್ವಜನಿಕರನ್ನು ಇಳಿಸಿ.ಗದಗ್ ರಸ್ತೆಯ ರೈಲ್ವೆ ಮೈದಾನ ಗ್ರೌಂಡ್ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

**ಗೋಕುಲ್ ರೋಡ್ ಹಾಗೂ ಧಾರವಾಡದಿಂದ ಬರುವ ವಾಹನಗಳಿಗೆ ಚನ್ನಮ್ಮ ಸರ್ಕಲ್ ಮುಖಾಂತರ ಚಿಟಗುಪ್ಪಿ ಆಸ್ಪತ್ರೆಯ ಬಳಿ ಸಾರ್ವಜನಿಕರನ್ನು ಇಳಿಸಿ ಗದಗ್ ರಸ್ತೆಯ ರೈಲ್ವೆ ಮೈದಾನದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ**

ಈ ನಡುವೆ ಪ್ರಬಲ ಪಂಚಮಸಾಲಿ ಸಮುದಾಯದ ಸಭೆಗಳು ಕ್ರಮವಾಗಿ ಜಯಮೃತ್ಯುಂಜಯ ಸ್ವಾಮೀಜಿ ಹಾಗೂ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ (ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ) ನಡೆದಿವೆ. ಧರ್ಮದ ಕಾಲಂನಲ್ಲಿ ಹಿಂದೂ ಎಂಬುದಾಗಿ ನಮೂದಿಸಬೇಕು; ಜಾತಿ – ಉಪಜಾತಿಯ ಕಾಲಂನಲ್ಲಿ ಲಿಂಗಾಯತ ಪಂಚಮಸಾಲಿ ಎಂಬುದಾಗಿ ಬರೆಸಬೇಕು' ಎನ್ನುವ ಮಾತು ಕೇಳಿ ಬಂದಿದೆ. ಆದ–'ರೆ ಹಿಂದೂ ಎಂದು ಬರೆಸುವುದಕ್ಕೆ ಈ ಎರಡೂ ಸಭೆಗಳಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿ,ಇತರೇ ಎಂದು ಬರೆಸಿದರೆ ಸಾಂವಿಧಾನಿಕವಾಗಿ ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ಮಾನ್ಯತೆ ದೊರೆಯುತ್ತದೆ' ಎನ್ನುವ ವಾದ ಕೇಳಿ ಬಂದಿದೆ.

ಈ ನಡುವೆ ಲಿಂಗಾಯತರ ಇನ್ನೊಂದು ಪ್ರಬಲ ಸಮುದಾಯವಾಗಿರುವ ರಡ್ಡಿ ಲಿಂಗಾಯತ ನಾಯಕರು 'ರಡ್ಡಿ ಲಿಂಗಾಯತ' ಎಂದೇ ಬರೆಸುವಂತೆ ಜಾಹೀರಾತುಗಳ ಮೂಲಕ ಈ ಉಪ ಜಾತಿಯ ಸಮುದಾಯದವರಿಗೆ ಕರೆ ನೀಡಿದ್ದಾರೆ.













ಶ್ರೀ ಮದ್ರಂಭಾಪುರಿ ಜಗದ್ಗುರುಗಳ ಸಾನಿಧ್ಯದಲ್ಲಿ ಕೊಪ್ಪಳ ಜಿಲ್ಲೆ ರಾಜೂರ ಗ್ರಾಮದಲ್ಲಿ ಪೂಜ್ಯಶ್ರೀ ಲಿಂ. ಮದ್ಘನಲಿಂಗ ಚಕ್ರವರ್ತಿ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳ ಬೃಹನ್ಮಠ ಲೋಕಾರ್ಪಣೆ ನಿಮಿತ್ಯ ನಡೆದ ಮಠಮನ್ಯಗಳಿಗೆ ಪುತ್ರದಾನ ಮಾಡಿದ ಮಹನಿಯರಿಗೆ ಪಂಚಾಕ್ಷರ ಪ್ರೇಮ ಪ್ರಶಸ್ತಿ ಪುರಸ್ಕಾರ ಸಮಾರಂಭಕ್ಕೆ ನನ್ನನ್ನ ಅತಿಥಿಯನ್ನಾಗಿ ಆಹ್ವಾನಿಸಿ ಆಶೀರ್ವದಿಸಿದ ಶ್ರೀಮಠದ ಪ್ರಸ್ತುತ ಪಟ್ಟಾಧ್ಯಕ್ಷರಾದ ಶ್ರೀ ಮ.ಘ.ಚ ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳಿಗೆ ಭಕ್ತಿಯ ನಮನಗಳೊಂದಿಗೆ ಸದಾ ಋಣಿಯಾಗಿದ್ದೇನೆ **ವಿಜಯಕುಮಾರ್ ಹಿರೇಮಠ**






Snehajeevi Kannada Daily, Printed and Published and owned by ABDULHAMEED SHALAGAR House No. 6421 Rajput Oni, Betageri-Gadag, State : Karnataka
Editor : ABDULHAMEED SHALAGAR, Printed at : Prabhu Graphics, 3094A, Station Road Gadag, District Gadag 582 101 State : Karnataka